# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

65,000

HAMPI TIMES E-PAPER READERS

94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:01 Volume:01 • ಸಂಚಿಕೆ:325 Issue:325 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 28.05.2024 28.05.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ


## ಮೈಕ್ರೋ ನ್ಯೂಸ್


ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ e-paper
REACH EVERY WHERE NO BORDER
ADS
9448633038
www.hampitimes.com


# ಟ್ಯಾಂಕರ್ ನೀರಿಗೆ ಹೆಚ್ಚಿದ ಒಲವು

### ಅಧಿಕಾರಿಗಳ, ಜನಪ್ರತಿನಿಧಿಗಳ ತಾತ್ಸಾರದಿಂದ ಮುಗಿಯದ ಪೈಪ್‌ಲೈನ್ | ಎರಡು ದಶಕಗಳಿಂದ ತಪ್ಪದ ಟ್ಯಾಂಕರ್ ನೀರು ಪೂರೈಕೆ ನಗರಸಭೆಗೆ ಶತಮಾನ | ಟ್ಯಾಂಕರ್ ನೀರಿಗೆ ಹಾಲಿ-ಮಾಜಿ ಶಾಸಕರ ಹಗ್ಗ-ಜಗ್ಗಾಟ | ಜನರ ಚಿತ್ತ ಶಾಶ್ವತ ಪರಿಹಾರದತ್ತ ಮಾಜಿ ಸಚಿವ ಆನಂದಸಿಂಗ್- ಶಾಸಕ ಗವಿಯಪ್ಪನ ನಡುವೆ ಫೋನ್ ಸಂಭಾಷಣೆ | ಜನರ ಸಮಸ್ಯೆಗೆ ಬೀದಿಗಿಳಿಯುವೆ ಎಂದ ಸಿಂಗ್

■ **ಹಂಪಿ ಟೈಮ್ಸ್ ಹೊಸಪೇಟೆ**

ಶತಮಾನದ ಸಂಭ್ರಮ ಕಂಡ ಹೊಸಪೇಟೆ ನಗರಸಭೆಯು ನಗರದ 35 ವಾರ್ಡ್‌ಗಳ ಜನರಿಗೆ ಇಂದಿಗೂ ಸಮರ್ಪಕ ಕುಡಿಯುವ ನೀರು ಒದಗಿಸುವಲ್ಲಿ ಎಡವಿದೆ. ಈವರೆಗೂ ಆಡಳಿತ ನಡೆಸಿದ ಅಧಿಕಾರಿಗಳು, ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯಿಂದ ನೀರಿನ ಸಮಸ್ಯೆಗಳು ಜೀವಂತವಾಗಿವೆ ಎಂಬುದಕ್ಕೆ ಭಾನುವಾರ ನೀರಿಗಾಗಿ ಹಾಲಿ-ಮಾಜಿ ಶಾಸಕರ ನಡುವೆ ನಡೆದ ಹಗ್ಗ ಜಗ್ಗಾಟವೇ ಸಾಕ್ಷಿಯಾಗಿದ್ದು, ಜನಪ್ರತಿನಿಧಿಗಳ ಸ್ವಪ್ರತಿಷ್ಠೆಯ ಹೋರಾಟದ ನಡುವೆ ಜನಸಾಮಾನ್ಯರು ನಿತ್ಯ ಶುದ್ಧ ಕುಡಿಯುವ ನೀರಿಗಾಗಿ ಪರದಾಡುವಂತಾಗಿದೆ.

ನಗರಸಭೆ ವ್ಯಾಪ್ತಿಯ ಚಿತ್ತವಾಡ್ಗಿ ಪ್ರದೇಶದಲ್ಲಿರುವ ಶುದ್ಧನೀರು ಸಂಸ್ಕರಣದ ಘಟಕದಿಂದ ವಿಜಯನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾದಾಗ ಮತ್ತು ನೀರಿನ ಬೇಡಿಕೆ ಇರುವ ಕಡೆ ಮಾಜಿ ಸಚಿವ ಆನಂದಸಿಂಗ್ ಅವರು ತಮ್ಮ ಸ್ವಂತ ನೀರಿನ ಟ್ಯಾಂಕರ್‌ಗಳ ಮೂಲಕ ಕಳೆದೆರಡು ದಶಕಗಳಿಂದ ಉಚಿತವಾಗಿ ನೀರು ಕಳಿಸುತ್ತಾ ಬಂದಿದ್ದಾರೆ. ಇತ್ತೀಚೆಗೆ ಮಾಜಿ ಶಾಸಕರ ಖಾಸಗಿ ವಾಹನದ ಮೂಲಕ ಗ್ರಾಮದ ಜನರಿಗೆ ನೀರು ಪೂರೈಸಿ, ಅಧಿಕಾರವಿಲ್ಲದಿದ್ದರೂ ನೀರು ಪೂರೈಸುತ್ತಿದ್ದಾರೆ ಎಂಬ ವೀಡಿಯೊವೊಂದು ಸಿಂಗ್ ಅಭಿಮಾನಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು. ಇದರಿಂದ





ಕುಪಿತಗೊಂಡವರು ಕೂಡಲೇ ನಗರಸಭೆ ಅಧಿಕಾರಿಗಳಿಗೆ ಖಾಸಗಿ ವಾಹನಗಳಿಗೆ ನಗರಸಭೆಯ ನೀರು ನೀಡದಂತೆ ಮೌಖಿಕ ಆದೇಶ ರವಾನಿಸಿದ್ದಾರೆ. ಮೌಖಿಕ ಆದೇಶ ಪಾಲನೆಗೆ ಮುಂದಾದ ಪೌರಾಯುಕ್ತರನ್ನು ನಗರಸಭೆ ಅಧ್ಯಕ್ಷರು, ಸದಸ್ಯರು ಮತ್ತು ಮಾಜಿ ಶಾಸಕ ಆನಂದಸಿಂಗ್ ತರಾಟೆಗೆ ತೆಗೆದುಕೊಂಡರು.

ನಗರಸಭೆ ವ್ಯಾಪ್ತಿಯಲ್ಲಿ ನಿತ್ಯ ನೀರಿಗಾಗಿ ಜನರು ಪರದಾಡುತ್ತಿದ್ದಾರೆ. ಟ್ಯಾಂಕರ್ ಮೂಲಕ ಉಚಿತವಾಗಿ ನೀರು ಪೂರೈಕೆ ಮಾಡಲಾಗುತ್ತಿದೆ. ಎರಡು ದಶಕಗಳಿಂದ ನೀರು ಪೂರೈಸುತ್ತಾ ಬಂದಿದ್ದೇವೆ. ದಿಢೀರನೆ ನೀರು ಕೊಡುವುದಿಲ್ಲ ಎನ್ನುವುದೇಕೆ? ನಾವೇನು ಹೊಲ, ತೋಟಕ್ಕೆ ಬಳಸುತ್ತೇವೆಯೋ? ಜನರಿಗೆ ತಲುಪಿಸುತ್ತಿದ್ದೇವೆ ಎಂದು ಮಾಜಿ ಶಾಸಕ ಆನಂದಸಿಂಗ್ ಅಧಿಕಾರಿಯನ್ನ ತರಾಟೆಗೆ ತೆಗೆದುಕೊಂಡರು. ಇದಕ್ಕೆ ಸದಸ್ಯರು ಧ್ವನಿಗೂಡಿಸಿದರು. ಸರ್ಕಾರದ ನಿಯಮಗಳನ್ನು ಪಾಲಿಸಬೇಕೋ, ಹಾಲಿ-ಮಾಜಿ ಜನಪ್ರತಿನಿಧಿಗಳ ಮೌಖಿಕ ಮಾತುಗಳನ್ನು ಪಾಲಿಸಬೇಕೋ ಎಂಬುದು ತಿಳಿಯದಂತಾದ ಪೌರಾಯುಕ್ತ ಚಂದ್ರಪ್ಪ ಅವರು, ಖಾಸಗಿ ವಾಹನಗಳ ಮೂಲಕ ನೀರನ್ನು ದುರಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬ ದೂರಿನ ಹಿನ್ನೆಲೆಯಲ್ಲಿ ಖಾಸಗಿ ವಾಹನಗಳಿಗೆ ನೀರು ಕೊಡುವುದಿಲ್ಲ. ನಗರಸಭೆ ವಾಹನಗಳಿಂದಲೇ ನೀರು ಪೂರೈಸುತ್ತೇವೆ ಎಂದು ಪೌರಾಯುಕ್ತರು ಮಾಜಿ ಶಾಸಕ ಆನಂದಸಿಂಗ್ ಅವರಿಗೆ ಹೇಳುತ್ತಿದ್ದಂತೆ, ಸದಸ್ಯರು, ಮಾಜಿ ಶಾಸಕರು ಮತ್ತು ಬೆಂಬಲಿಗರು ಅಧಿಕಾರಿ ಹೇಳಿಕೆ ವಿರುದ್ಧ ದಿಕ್ಕಾರ ಕೂಗಿದರು. ಸ್ಥಳದಲ್ಲೇ ಮಾಜಿ ಸಚಿವ ಆನಂದಸಿಂಗ್ ಅವರು ಶಾಸಕ ಗವಿಯಪ್ಪನವರಿಗೆ ಫೋನ್ ಮಾಡಿ ಮಾತನಾಡಿದಾಗ, ಗವಿಯಪ್ಪನವರ ಮಾತುಗಳು ಆನಂದಸಿಂಗ್ ಅವರನ್ನು ಕೆರಳಿಸಿದವು. ಪ್ರಜಾಪುಭುತ್ವದಲ್ಲಿ ನ್ಯಾಯ ಕೇಳುವ ಹಕ್ಕು ಎಲ್ಲರಿಗೂ ಇದೆ. ನೀರು ಕೊಡುವುದಿಲ್ಲ ಎಂದರೆ ಬಿಡುವುದಿಲ್ಲ. ನನ್ನ ಮನೆಯನ್ನು ಜಿಂದಾಲ್ ನವರು ಕಟ್ಟಿಸಿಕೊಟ್ಟಿದ್ದಾರೆ ಎಂದು ಕಾಂಗ್ರೆಸ್ ಸಚಿವರ ಮುಂದೆ ಹೇಳಿದ್ದೀರಿ, ಸಾಯಿಬಾಬ ಮೇಲೆ ನೀವು ಪ್ರಮಾಣ ಮಾಡಿ, ನಾನು ಪ್ರಮಾಣ ಮಾಡುವೆ ಎಂದು ಕೆಲ ನಿಮಿಷ ಇಬ್ಬರ ನಡುವೆ ನಡುರಸ್ತೆಯಲ್ಲೆ ಫೋನಿನಲ್ಲಿ ಮಾತಿನ ಚಕಮಕಿ ನಡೆಯಿತು. ಖಾಸಗಿ ವಾಹನಗಳಿಗೆ ನೀರು ಕೊಡುವುದಿಲ್ಲ ಎಂಬ ಶಾಸಕ ಗವಿಯಪ್ಪನವರ ಮಾತನ್ನು ವಿರೋಧಿಸಿ ಬೀದಿಯಲ್ಲಿ ಕುಳಿತು ನೀರಿಗಾಗಿ ಪ್ರತಿಭಟನೆ ನಡೆಸಿದರು. ಅಧಿಕಾರವಿದ್ದ ನಗರಸಭೆ ಸದಸ್ಯರು ನಗರಸಭೆ ಸಭಾಂಗಣದಲ್ಲೇ ಪೌರಾಯುಕ್ತರಿಗೆ ನಿರ್ದೇಶನ ನೀಡುವ ಮೂಲಕ ಅಧಿಕಾರ ಚಲಾಯಿಸುವ ಬದಲು ಅಧಿಕಾರವುಳ್ಳವರೇ ಬೀದಿಗಿಳಿದು ನಡೆಸಿದ ಹೋರಾಟ ಅನೇಕರಿಗೆ ಹೈಡ್ರಾಮವೆನಿಸಿತು.

ಪೌರಾಯುಕ್ತರು ಮಾತನಾಡಿ, ಯಾವುದೇ ಕಾರಣಕ್ಕೂ ಖಾಸಗಿ ವಾಹನಗಳಿಗೆ ನೀರು ಕೊಡುವುದಿಲ್ಲ. ಈಗಾಗಲೇ ಕೆಲ ಖಾಸಗಿ ಟ್ಯಾಂಕರ್‌ಗಳನ್ನು ಟೆಂಡರ್ ಮೂಲಕ ಪಡೆದಿದ್ದು, ಅವುಗಳ ಮೂಲಕ ನೀರಿನ ಸಮಸ್ಯೆ ಇರುವ ವಾರ್ಡ್‌ಗಳಿಗೆ ಕಳಿಸುತ್ತೇವೆ. ದಿನಕ್ಕೆ ಒಟ್ಟು 38 ಟ್ಯಾಂಕ್ ನೀರು ಪೂರೈಸಲಾಗುತ್ತಿದೆ. ಇನ್ನೂ ಹೆಚ್ಚು ಅಗತ್ಯವೆನಿಸಿದರೆ ಮತ್ತಷ್ಟು ಟೆಂಡರ್ ಮೂಲಕ ಟ್ಯಾಂಕರ್ ಪಡೆದು ನೀರು ಪೂರೈಸುತ್ತೇವೆ ಎಂದರು. ನೀರಿನ ಸಮಸ್ಯೆ ಪರಿಹಾರಕ್ಕಾಗಿ ಅಧ್ಯಕ್ಷರ ಅಪ್ಪಣೆಮೇರೆಗೆ ಪೌರಾಯುಕ್ತರು ಸೋಮವಾರ ಮಧ್ಯಾಹ್ನ ಸದಸ್ಯರ ತುರ್ತು ಸಭೆ ಕರೆದರು. ಕೊನೆಗೆ ಆನಂದಸಿಂಗ್ ಅವರ ಟ್ಯಾಂಕರ್‌ಗಳಿಗೆ ನೀರು ಬಿಟ್ಟಿದ್ದರಿಂದ ಮಾಜಿ ಶಾಸಕ, ಸದಸ್ಯರು ಪ್ರತಿಭಟನೆ ಕೈಬಿಟ್ಟರು.

### ಜನಾಶಯಕ್ಕೆ ಬೇಕಿದೆ ಸ್ಪಂದನೆ

ನಗರದ ಮನೆ ಮನೆಗೆ ನೀರು ಪೂರೈಸಲೆಂದೇ ಈಗಾಗಲೇ ಕೋಟ್ಯಾಂತರ ರೂ ವೆಚ್ಚದಲ್ಲಿ 24/7 ನೀರು ಪೂರೈಸಲು ಪೈಪ್ ಲೈನ್ ಮಾಡಿದ್ದರೂ ಪ್ರಯೋಜನವಿಲ್ಲದಂತಾಗಿದೆ. ಬೇಕಾಬಿಟ್ಟಿ ಕಾಮಗಾರಿಗಳಿಂದಾಗಿ ಜನರ ತೆರಿಗೆ ಹಣವನ್ನು ನೀರಿನಲ್ಲಿ ಹೋಮ ಮಾಡಿದಂತೆ ಖರ್ಚು ಮಾಡಲಾಗುತ್ತಿದೆ ಎಂಬ ಆರೋಪಗಳು ದಟ್ಟವಾಗಿವೆ. ಪೈಪ್‌ಲೈನ್ ಮೂಲಕ ನೀರು ಸರಬರಾಜು ಮಾಡಿದರೆ ಟ್ಯಾಂಕರ್‌ಗಳ ಕಿತ್ತಾಟವೂ ಇಲ್ಲದಂತಾಗುತ್ತದೆ. ಇಂದಿಗೂ ಅಸಮರ್ಪಕ ಪೈಪ್‌ಲೈನ್ ಮೂಲಕ ಕುಡಿಯುವ ನೀರನ್ನು ಪೂರೈಸಿ, ಜನರ ಜೀವದ ಜೊತೆ ಆಡುವ ಚೆಲ್ಲಾಟಕ್ಕೆ ಕೊನೆ ಇಲ್ಲದಂತಾಗಿದೆ. ಇನ್ನಾದರೂ ಜನಪ್ರತಿನಿಧಿಗಳು ಟ್ಯಾಂಕರ್ ನೀರು ಪೂರೈಕೆಗಿಂತ ಜನರ ಆರೋಗ್ಯ ದೃಷ್ಟಿಯಂದ ಮತ್ತು ನಗರಸಭೆಗೆ ಆರ್ಥಿಕ ಹೊರೆ ತಗ್ಗಿಸುವ ದೃಷ್ಟಿಯಿಂದ ಈಗಾಗಲೇ ಅಳವಡಿಸಿರುವ ಪೈಪ್‌ಲೈನ್ ಮೂಲಕ ಮನೆ ಮನೆಗೆ ಶುದ್ಧ ಕುಡಿಯುವ ನೀರು ಪೂರೈಸಲು ಮುಂದಾಗಬೇಕು, ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

## ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಿ ಡಿಸಿ ಮಿಶ್ರಾ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಮೇ 28 ರಂದು ನಗರದ 02 ಕೇಂದ್ರಗಳಲ್ಲಿ 2024-25ನೇ ಸಾಲಿಗೆ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು 6ನೇ ತರಗತಿಗೆ ಅರ್ಹತಾ ಪರೀಕ್ಷೆಯ ಮೂಲಕ ಸೇರ್ಪಡೆ ಮಾಡಲು ಪ್ರವೇಶ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ-ಮುತ್ತ 200 ಮೀಟರ್ ಒಳಗಿನ ಆವರಣವನ್ನು ಸಿಆರ್‌ಪಿಸಿ ಕಲಂ 144ರ ಮೇರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ನಗರದ ರೇಡಿಯೋ ಪಾರ್ಕ್‌ನ ಸೇಂಟ್ ಜೋಸೆಫ್ (ಬಾಲಕಿಯರ) ಪ್ರೌಢಶಾಲೆ ಮತ್ತು ಸೇಂಟ್ ಜೋಸೆಫ್ (ಬಾಲಕಯರ) ಪ್ರೌಢಶಾಲೆ ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆಗಳು ಬೆಳಿಗ್ಗೆ 09.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ನಡೆಯಲಿವೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಒಳಗಿನ ಆವರಣವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿದ್ದಾರೆ. ಅನಧೀಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ ಹಾಗೂ ಬೆಳಿಗ್ಗೆ 08 ರಿಂದ ಮಧ್ಯಾಹ್ನ 03 ರ ವರೆಗೆ ಪರೀಕ್ಷಾ ಕೇಂದ್ರಗಳ ಸುತ್ತ-ಮುತ್ತಲಿನ ಝೆರಾಕ್ಸ್ ಅಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

### ಮೇ 30 ರಿಂದ ಜೂನ್ 3 ರವರೆಗೆ

## ಶ್ರೀ ಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ಹುಲಿಗಿ ಗ್ರಾಮದ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ 2024ನೇ ಸಾಲಿನ ವಾರ್ಷಿಕ ಜಾತ್ರಾ ಮಹೋತ್ಸವವು ಮೇ 30ರಿಂದ ಜೂನ್ 3ರವರೆಗೆ ನಡೆಯಲಿದ್ದು, ಜಾತ್ರಾ ಮಹೋತ್ಸವಕ್ಕೆ ಹಲವು ಜಿಲ್ಲೆ ಹಾಗೂ ರಾಜ್ಯಗಳಿಂದ 5 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಬರುವುದರಿಂದ ಭಕ್ತಾದಿಗಳ ಅನುಕೂಲಕ್ಕಾಗಿ ಜಾತ್ರೆಯ ಕಾರ್ಯಕ್ರಮಗಳಿಗೆ ಅಗತ್ಯ ಸಿದ್ದತೆ ಮಾಡಿಕೊಳ್ಳಲಾಗಿದೆ.



ಧಾರ್ಮಿಕ ಕಾರ್ಯಕ್ರಮಗಳ ವಿವರ :

ಶ್ರೀ ಹುಲಿಗೆಮ್ಮ ದೇವಿಯ ಜಾತ್ರೆಯು ಮೇ 30 ರಿಂದ ಜೂನ್ 3 ರವರೆಗೆ ಜರುಗಲಿದ್ದು, ಕಾರ್ಯಕ್ರಮದ ವಿವರ ಇಂತಿದೆ.

ಮೇ 30 ರಂದು ಸಂಜೆ 7 ಗಂಟೆಗೆ ಉತ್ಸವ, ಮೇ 31 ರಂದು ಅಕ್ಕಿಪಡಿ, ಸಂಜೆ 5-30 ಗಂಟೆಗೆ ಮಹಾರಥೋತ್ಸವ ಜರುಗಲಿದೆ. ಜೂನ್ 01 ರಂದು ಬಾಳಿದಂಡಿಗೆ, ರಾತ್ರಿ 8 ಗಂಟೆಗೆ ಕೊಂಡದ ಪೂಜಾ, ರಾತ್ರಿ 3-30 ಗಂಟೆಗೆ (ಬ್ರಾಹ್ಮೀ ಮುಹೂರ್ತದಲ್ಲಿ) ಗಂಗಾದೇವಿ ಪೂಜಾ, ಬೆಳಗಿನ ಜಾವ 4 ಗಂಟೆಗೆ ಶ್ರೀದೇವಿಗೆ ಪ್ರಸಾದ ಕೇಳುವುದು, ಬೆಳಗಿನ ಜಾವ 4-30 ಕ್ಕೆ ಬಾಳಿದಂಡಿಗೆ ಆರೋಹಣ ನಡೆಯಲಿದೆ.

ಜೂನ್ 02 ರಂದು ಪಾಯಸ ಅಗ್ನಿಕೊಂಡ ನಡೆಯಲಿದ್ದು, ಸಂಜೆ 8 ಗಂಟೆಗೆ ಕೊಂಡದ ಪೂಜಾ, ರಾತ್ರಿ 9 ಕ್ಕೆ ಹಿಡಿದಕ್ಷಿಣೆ ವಿತರಣೆ, 9-30 ಕ್ಕೆ ಪಡಗದ ಪೂಜಾ, ಬೆಳಗಿನಜಾವ 4 ಗಂಟೆಗೆ (ಬ್ರಾಹ್ಮೀ ಮುಹೂರ್ತದಲ್ಲಿ) ಗಂಗಾದೇವಿ ಪೂಜಾ, ಬೆಳಗಿನ ಜಾವ 4-30ಕ್ಕೆ ಗಂಟೆಗೆ ಶ್ರೀದೇವಿಗೆ ಪ್ರಸಾದ ಕೇಳುವುದು, ಬೆಳಗಿನ ಜಾವ 5-30 ಗಂಟೆಗೆ ಶ್ರೀದೇವಿಗೆ ಪಾಯಸ ಪ್ರಸಾದ ನಿವೇದನೆ ಹಾಗೂ ಜೂನ್ 03 ರಂದು ಬೆಳಿಗ್ಗೆ 6-30 ಗಂಟೆಗೆ (ದ್ವಾದಶಿ ನಸುಕಿನಲ್ಲಿ) ಅಗ್ನಿಕುಂಡ ನಡೆಯಲಿದೆ. ಜೂನ್ 25 ರಂದು ರಾತ್ರಿ 8 ಗಂಟೆಗೆ ಶ್ರೀದೇವಿಯವರ ಕಂಕಣ ವಿಸರ್ಜನೆ ಮಾಡಲಾಗುವುದು ಎಂದು ಹುಲಿಗೆಮ್ಮ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪೊಲೀಸರ ಸರ್ಪಗಾವಲಿನಲ್ಲಿ ಎರಡು ಖಾಸಗಿ ಟ್ಯಾಂಕರ್ ನೀರಿಗೆ ನಗರಸಭೆ ತುರ್ತು ಸಭೆ

### ನೀತಿ ಸಂಹಿತೆ: ಸದಸ್ಯರ ಒಕ್ಕೊರಳ ಧ್ವನಿಗೆ ಒಪ್ಪದ ಪೌರಾಯುಕ್ತರು



■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ಈಗಾಗಲೇ ನಗರಸಭೆಯಿಂದ ನೀರಿನ ಸಮಸ್ಯೆ ಎದುರಿಸುವ ಸ್ಥಳಕ್ಕೆ ನಗರಸಭೆಯಿಂದಲೇ ಖಾಸಗಿ ಟ್ಯಾಂಕರ್‌ಗಳನ್ನು ಟೆಂಡರ್ ಮೂಲಕ ಪಡೆದು ನೀರು ಪೂರೈಸಲಾಗುತ್ತಿದ್ದು, ಹೆಚ್ಚುವರಿ ಅಗತ್ಯ ಬಿದ್ದರೆ ಅದಕ್ಕೂ ವ್ಯವಸ್ಥೆ ಕೈಗೊಳ್ಳಲಾಗಿದೆ. ಖಾಸಗಿಯವರ ಕೇವಲ ಎರಡು ಟ್ಯಾಂಕರ್‌ಗಳಿಗೆ ನೀರು ತುಂಬಿಸುವ ಕುರಿತು ಅಧ್ಯಕ್ಷರ ಅಪ್ಪಣೆ ಮೇರೆಗೆ ಸೋಮವಾರ ಮಧ್ಯಾಹ್ನ ನಗರಸಭೆ ಸಮಾಂಗಣದಲ್ಲಿ ತುರ್ತು ಸಭೆ ಕರೆಯಲಾಗಿತ್ತು. ಸಭೆಯಲ್ಲಿ 28 ಸದಸ್ಯರು ಖಾಸಗಿಯವರ ಎರಡು ಟ್ಯಾಂಕರ್‌ಗಳಿಗೆ ನೀರು ಒದಗಿಸುವ ಕುರಿತು ಒಪ್ಪಿಗೆ ಇದೆ ಎಂದು ಸೂಚಿಸಿದರು. ಸದಸ್ಯ ಅಬ್ದುಲ್ ಖದೀರ್ ಅವರು ಖಾಸಗಿ ವ್ಯಕ್ತಿಗಳ ಟ್ಯಾಂಕ್‌ರ್‌ನಿಂದ ನೀರು ಸರಬರಾಜು ಮಾಡಲು ನಿಯಮಗಳಲ್ಲಿ ಯಾವುದೇ ಅವಕಾಶವಿಲ್ಲ ಎಂದು ತಿಳಿಸಿದರು. ಕೇವಲ ಎರಡು ಖಾಸಗಿ ಟ್ಯಾಂಕರ್‌ಗಳಿಗೆ ನೀರು ತುಂಬಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ತೀರ್ಮಾನ ಉಚಿತವಲ್ಲವೆಂದು ಸಭೆಗೆ ತಿಳಿಸಿದಾಗ್ಯೂ ಅಧ್ಯಕ್ಷರು ಮತ್ತು 28 ಸದಸ್ಯರು ಖಾಸಗಿ ಟ್ಯಾಂಕರ್‌ಗಳಿಗೆ ಇಂದಿನಿಂದಲೇ ಅನುವುಮಾಡಿಕೊಡಬೇಕೆಂದು ತೀರ್ಮಾನಿಸಿದ್ದನ್ನು ಸಭೆಯು ಒಪ್ಪಿ ತೀರ್ಮಾನಿಸಲಾಯಿತು. ತೀರ್ಮಾನದ ಕೈಗೊಳ್ಳಲು ನನಗೆ ಅಧಿಕಾರ ಇರುವುದಿಲ್ಲ. ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ ಎಂದು ಪೌರಾಯುಕ್ತ ಚಂದ್ರಪ್ಪ ತಿಳಿಸಿದ್ದಾರೆ.



## ಜೀವವಿಮಾ ಪ್ರತಿನಿಧಿಗಳ ಸಂಘಟಿತ ಹೋರಾಟಕ್ಕೆ ಫಲ ನಿಶ್ಚಿತ

### ಹೊಸಪೇಟೆ ಘಟಕದ ನೂತನ ಅಧ್ಯಕ್ಷ ಸೈಯದ್ ಬಶೀರ್ ಅಹಮದ್ ಅಭಿಮತ | ಪದಾಧಿಕಾರಿಗಳ ಆಯ್ಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಜೀವ ವಿಮಾ ಪ್ರತಿನಿಧಿಗಳ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಮತ್ತು ರಾಷ್ಟ ಮಟ್ಟದಲ್ಲಿ ಜೀವವಿಮಾ ಪ್ರತಿನಿಧಿಗಳು ಸಂಘಟಿತರಾಗಬೇಕಿದೆ. ಸಂಘಟಿತ ಹೋರಾಟಕ್ಕೆ ಫಲ ನಿಶ್ಚಿತ, ಸಂಘಟನೆಯನ್ನು ಬಲಿಷ್ಠವಾಗಿಸಲು ಎಲ್ಲಾ ಪ್ರತಿನಿಧಿಗಳ ಸಹಕಾರ ಅತ್ಯಗತ್ಯ ಎಂದು ಜೀವ ವಿಮಾ ಪ್ರತಿನಿಧಿ ಸಂಘಟನೆಯ ಹೊಸಪೇಟೆ ಘಟಕದ ನೂತನ ಅಧ್ಯಕ್ಷ ಸೈಯದ್ ಬಶೀರ್ ಅಹಮದ್ ಹೇಳಿದರು.

ನಗರದ ಗೌತಮ್ ಬುದ್ಧ ಫಂಕ್ಷನ್ ಹಾಲಿನಲ್ಲಿ ಶನಿವಾರ ನಡೆದ ಅಖಿಲ ಭಾರತ ಜೀವ ವಿಮಾ ಪ್ರತಿನಿಧಿಗಳ ಸಂಘಟನೆಯ 13ನೆಯ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದರು.ಪ್ರತಿಯೊಬ್ಬರು ತಾವಿರುವ ಮನೆ ಸುಭದ್ರವಾಗಿರಬೇಕೆಂಬುದು ಆಶಿಸಿದಂತೆನ ನಮಗೆ ನಮ್ಮ ಎಲ್‌ಐಸಿ ನಿಗಮದಷ್ಟೇ ನಮ್ಮ ಸಂಘಟನೆಯೂ ಮುಖ್ಯವಾಗಿದೆ. ನ್ಯಾಯೋಚಿತ ಹಕ್ಕು ಮತ್ತು ಬೇಡಿಕೆಗಳ ಈಡೇರಿಕೆಗೆ ಪ್ರತಿನಿಧಿಗಳು ದುಡಿಮೆಯ ಕೆಲ ಭಾಗವನ್ನು ಸಂಘಟನೆಗೆ ಮೀಸಲಿಡಬೇಕು. ಜೀವ ವಿಮಾದ ಬಗ್ಗೆ ಜನರಲ್ಲಿನ ನಂಬಿಕೆಗೆ ತಕ್ಕಂತೆ ಕೆಲಸ ಮಾಡುವ ಪ್ರವೃತ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಎಂದರು.



ಅಖಿಲ ಭಾರತ ಸಮಿತಿಯ ಕಾರ್ಯಾಧ್ಯಕ್ಷ ಎಲ್ ಮಂಜುನಾಥ್ ಮಾತನಾಡಿ, ಜೀವ ವಿಮಾ ಪ್ರತಿನಿಧಿಗಳ ಸಮೂಹವು ನಿರಂತರ ಶ್ರಮಪಡುತ್ತಿದೆ. ಪ್ರತಿನಿಧಿಗಳು ಸಂಘಟಿತರಾಗಿ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು, ಬೇಡಿಕೆ ಈಡೇರಿಕೆಗೆ ಹೋರಾಟವೊಂದೇ ಮಾರ್ಗ. ಕೇಂದ್ರ ಸರ್ಕಾರದ ನೀತಿಗಳು ಪ್ರತಿನಿಧಿಗಳ ವ್ಯಾಪಾರಕ್ಕೆ ಮಾರಕವಾಗಿವೆ ಮತ್ತು ಕೇಂದ್ರ ಸರ್ಕಾರ >> 3

## ಬೆಳಕಿನ ಹಾದಿ

# ವರ್ತಮಾನದ ಅರಿವೇ ನಿಜ ಬದುಕಿನ ಸಾಕ್ಷಾತ್ಕಾರ

■ ನಾಗರಾಜ ಮಗ್ಗದ ಕೊಟ್ಟೂರು



ಬದುಕಿನ ತಾತ್ತ್ವಿಕತೆಯನ್ನು ಪ್ರಚುರಪಡಿಸುವ ಝೆನ್, ಬೌದ್ಧ ಧರ್ಮದ ಕವಲು ತತ್ವವಾಗಿದೆ.ಅಂತಹ ಝೆನ್ ಕತೆಗಳ ಪೈಕಿ ಒಂದು ಕತೆ ಹೀಗಿದೆ. ತಿಡತಿಒಂದು ಮುಂಜಾನೆಯ ಸಮಯದಲ್ಲಿ ಒಬ್ಬ ಗುರು ತನ್ನ ಇಬ್ಬರು ಶಿಷ್ಯರ ಜೊತೆಯಲ್ಲಿ ತಮ್ಮ ಆಶ್ರಮದತ್ತ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡುತ್ತಿರುತ್ತಾರೆ.ಆಗ ,ಅವರ ಹಾದಿಯಲ್ಲಿ ತುಂಬಿದ ಹಳ್ಳವೊಂದು ರಭಸವಾಗಿ ಹರಿಯುತ್ತಿರುತ್ತದೆ.ಅವರು ಆ ಹಳ್ಳವನ್ನು ದಾಟಬೇಕಾಗಿರುತ್ತದೆ. ಅಲ್ಲದೇ ಇವರು ಅಲ್ಲಿ ತಲುಪುವುದಕ್ಕೆ ಮುಂಚಿತವಾಗಿ ತುಂಬಾ ಹೊತ್ತಿನಿಂದ ಒಂಟಿ ಹೆಂಗಸೊಬ್ಬಳು ಹಳ್ಳ ದಾಟಲಾಗದೆ ದಡದ ಬಳಿಯೇ ನಿಂತು ಕಾಯುತ್ತಿರುತ್ತಾಳೆ.ಆ ಗುರು-ಶಿಷ್ಯರು ಹಳ್ಳದ ಬಳಿ ಬರುತ್ತಲೇ ಶಿಷ್ಯರನ್ನು ಕುರಿತು "ನಾನು ಅವಸರವಾಗಿ ಎಲ್ಲಿಗೋ ಹೋಗಬೇಕಾಗಿದೆ. ದಯವಿಟ್ಟು ನನ್ನನ್ನು ಸಹಾ ನಿಮ್ಮೊಂದಿಗೆ ಕರೆದೊಯ್ದು ಈ ಹಳ್ಳವನ್ನು ದಾಟಿಸಿ, ಆ ಬದಿಗೆ ಬಿಡುವಿರಾ? ಒಬ್ಬಳೇ ಹಳ್ಳದಲ್ಲಿ ಇಳಿಯಲು ಭಯವಾಗುತ್ತಿದೆ." ಎಂದು ಬೇಡುತ್ತಾಳೆ. ಆಗ ಒಬ್ಬರಿಗೊಬ್ಬರು ಮುಖಗಳನ್ನು ನೋಡಿಕೊಂಡ ಶಿಷ್ಯರು ಗುರುವನ್ನೂ ನೋಡಿ, ಅವಳ ಮಾತಿಗೆ "ಹಳ್ಳವನ್ನು ದಾಟಿಸುವಾಗ ನಿಮ್ಮನ್ನು ಮುಟ್ಟಬೇಕಾಗುತ್ತದೆ. ನಾವು ಸಂನ್ಯಾಸಿಗಳಾದ್ದರಿಂದ ಸ್ತ್ರೀಯರನ್ನು ಸ್ಪರ್ಶಿಸುವಂತಿಲ್ಲ.ನಮ್ಮನ್ನು ಕ್ಷಮಿಸಿ." ಎಂದು ಶಿಷ್ಯರು ಪ್ರತಿಯಾಗಿ ನುಡಿದು ನಿರಾಕರಿಸಿದರು.

"ನೀವಾದರೂ ನನ್ನನ್ನು ಈ ಹಳ್ಳದಿಂದ ಪಾರುಮಾಡಿರಿ" ಎಂದು ಆ ಗುರುವನ್ನು ಹೆಂಗಸು ಕೇಳಿದಾಗ 'ಹಾಗೇ ಆಗಲಿ' ಎಂದು ಆ ಹೆಂಗಸನ್ನು ಆ ಬೌದ್ಧ ಗುರು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಹಳ್ಳವನ್ನುದಾಟಿಸಿದರು.ಇದರಿಂದ ಶಿಷ್ಯರು ಗೊಂದಲ,ಗಾಬರಿಗೊಳಗಾಗಿ ಇಡೀ ದಿನ ಚಿಂತಿತರಾದರು. ಅದನ್ನು ತಡೆಯಲಾಗದೆ, ಆಶ್ರಮದಲ್ಲಿ ಆ ದಿನ ಸಂಜೆ ಗುರುವನ್ನು ಉದ್ದೇಶಿಸಿ " ಗುರುಗಳೇ ನಾವು ಸಂನ್ಯಾಸಿಗಳು ಸ್ತ್ರೀಯರನ್ನು ಸ್ಪರ್ಶಿಸಬಾರದು,ಆಕರ್ಷಿತರಾಗಬಾರದು ಎಂದೇಳುವ ತಾವು ಇಂದು ಹೀಗೇಕೆ ಮಾಡಿದಿರಿ?" ಎಂದು ಕೇಳುತ್ತಾರೆ.

"ಅರೆ! ನಾನು ಏನು ಮಾಡಿದೆ?" ಗುರು ಆಶ್ಚರ್ಯಕರವಾಗಿ ಮರು ಪ್ರಶ್ನಿಸುತ್ತಾರೆ. "ಅದೇ ಈ ಮುಂಜಾನೆ ಹಳ್ಳ ದಾಟುವ ಸಂದರ್ಭದಲ್ಲಿ ಆ ಹೆಂಗಸನ್ನು ನಿಮ್ಮ ಹೆಗಲ ಮೇಲೆ ಹೊತ್ತುಕೊಂಡು ದಡ ಮುಟ್ಟಿಸಿದಿರಲ್ಲ. ಇದು ನಮ್ಮ ನಂಬಿಕೆಗೆ ವಿರೋಧವಲ್ಲವೇ? ಮಹಾ ಪ್ರಮಾದವಾಗಲಿಲ್ಲವೇ? "ಎಂದು ಶಿಷ್ಯರು ಗೊಂದಲಕ್ಕೊಳಗಾಗಿ ಹೇಳಿದ ಮಾತುಗಳನ್ನು ಕೇಳಿ ನಗುತ್ತಾ ಬೌದ್ಧ ಗುರು " ಅಲ್ರಯ್ಯಾ ನಾನು ಆ ಹೆಂಗಸನ್ನು ಹೆಗಲ ಮೇಲೆ ಹೊತ್ತುಕೊಂಡು ಆ ತಟದಲ್ಲಿಯೇ ಇಳಿಸಿ ಬಂದೆ.ನೀವಾದರೋ ಆಕೆಯನ್ನು ಇಲ್ಲಿಯವರೆಗೂ ಹೊತ್ತುಕೊಂಡೇ ಬಂದಿದ್ದೀರಿ.ಅಲ್ಲದೇ ಆಕೆಯನ್ನು ಇನ್ನೂ ಹೊತ್ತುಕೊಂಡೇ ಇದ್ದೀರಿ. ಮೊದಲು ಕೆಳಗಿಳಿಸಿ ಹಗುರಾಗಿರಿ. ನಿಮ್ಮ ಪ್ರಶ್ನೆಗೆ ಉತ್ತರ ಸಿಗುತ್ತದೆ." ಎಂದೇಳಿ ಸುಮ್ಮನಾದರು.

ಬರೀ ಭೂತದ ಕಹಿ ನೆನಪುಗಳನ್ನು, ಘಟನೆಗಳನ್ನು ಸೋಲುಗಳನ್ನು ಮತ್ತೆ ಮತ್ತೆ ಮೆಲುಕು ಹಾಕಿ ಮನೋ ಸ್ವಾಸ್ಥ್ಯವನ್ನು ಹದಗೆಡಿಸಿಕೊಂಡು ವರ್ತಮಾನದ ಖುಷಿಗೆ ವಿಮುಖರಾಗಿ ಬದುಕುವ ಮನುಷ್ಯರ ಜೀವನದೃಷ್ಟಿಗೆ ಆ ಬೌದ್ಧ ಗುರು ಹೇಳಿದ ಮಾತು ಅತ್ಯಂತ ಮಾರ್ಮಿಕ ವಾಗಿ ಅನ್ವಯವಾಗುತ್ತದೆ. ಬದುಕು ಸ್ಥಾವರವಾಗದೆ ಜಂಗಮಸ್ವರೂಪಿಂ ೞಾಗಬೇಕು.ನಿಂತ ನೀರು ದುರ್ನಾತಕ್ಕೆ ಕಾರಣವಾಗುತ್ತದೆ ಹೊರತು ಹರಿಯುವ ನಿರ್ಮಲ ನದಿಯಲ್ಲ. ತನ್ನ ನಿಬಂಧನೆಗಳನ್ನು ಬದಿಗಿಟ್ಟು ಅಸಹಾಯಕಳಾಗಿದ್ದ ಆ ಹೆಂಗಸನ್ನು ಹಾಗೇ ಬಿಟ್ಟು ಹೋಗದೆ ದಡ ಸೇರಿಸಿದ ಬೌದ್ಧ ಗುರುವಿನ ಸಮಯ ಪ್ರಜ್ಞೆ, ವಿವೇಚನಾಯುಕ್ತ ನಿರ್ಧಾರ ಮಾನವೀಯ ಹಾಗೂ ಜೀವಪರವಾದ ಬದ್ಧತೆಯನ್ನು ಅತ್ಯಂತ ಸಶಕ್ತವಾಗಿ ಈ ಝೆನ್ ಕತೆ ಬೋಧಿಸಿದೆ.ಬದುಕಿನಲ್ಲಿ ಎದುರಾಗುವ ಸಂದರ್ಭಗಳು ಎಲ್ಲಾ ಕಾಲಕ್ಕೂ ಒಂದೇ ತೆರನಾಗಿರುವುದಿಲ್ಲ.ಅವುಗಳನ್ನು ನಿಭಾಯಿಸುವ, ಒಪ್ಪಿಕೊಳ್ಳುವ 'ಸ್ಥಿತ ಪ್ರಜ್ಞೆ' ಯೊಂದು ನಮ್ಮಲ್ಲಿ ಯಾವಾಗಲೂ ಜಾಗೃತವಾಗಿರಬೇಕು.ಇದನ್ನೇ ದೊಡ್ಡವರು ಜೀವನ ಪ್ರೀತಿ ಎಂದು ವ್ಯಾಖ್ಯಾನಿಸುತ್ತಾರೆ.

ಕಳೆದುಹೋದ ದಿನಗಳಲ್ಲಿನ ಕಹಿ ಘಟನೆಗಳನ್ನಾಗಲೀ,ಸೋಲುಗಳನ್ನಾಗಲೀ, ಸಾವನ್ನಾಗಲೀ ಶತ್ರುತ್ವವನ್ನಾಗಲೀ ಮರೆತು ಮುನ್ನಡೆಯದಿದ್ದರೆ, ಆ ಹೆಂಗಸಿನ ವಿಚಾರವಾಗಿ ಚಿಂತಿತರಾದ ಆ ಶಿಷ್ಯರ ಹೊಯ್ದಾಟದ ಮನಸ್ಥಿತಿಯಂತೆ ಬದುಕಿನ ವರ್ತಮಾನ ಗೊಂದಲದ ,ಆತಂಕದ, ದುಃಖದ,ಅಶಾಂತಿಯ ಕೂಪದಲ್ಲಿ ದೂಡಿ ಹೊರಬರಲಾಗದಷ್ಟೂ ಕಷ್ಟವನ್ನು ತಂದೊಡ್ಡುವುದಂತೂ ವಾಸ್ತವ ಸತ್ಯ.

"ಲೀಲೆಯೆಂಬುವುದೆಲ್ಲ ಮೂಡುವುದು ಮುಳುಗುವುದರಲ್ಲಿಹುದು. ಅದಕೇಕೆ ಮರುಗುವುದು? ಕನಸಿನಲಿ ಕಂಡ ಕಡವರಮಳಿಯೆ ಎಚ್ಚತ್ತು ಶೋಕಿಪುದು ಉಚಿತಮಲ್ತು. ಸಾವೇ ಹೊಸಬಾಳಿಗೆ ಆಧಾರಮಾಗಿರ್ಪುದು. ನಾಶಮೇ ನವಸೃಷ್ಟಿಗೆ ಉತ್ಸಾಹಂ ಆದಪುದು! " ಕುವೆಂಪು ಅವರ ಸ್ಮಶಾನ ಕುರುಕ್ಷೇತ್ರ ನಾಟಕದಲ್ಲಿ ಕಲಿ ದ್ವಾಪರನಿಗೆ ಹೇಳುವ ಈ ಸಂಭಾಷಣೆಯಲ್ಲಿ ಬದುಕಿನ ಕುರಿತಾದ ಮತ್ತೊಂದು ಆಯಾಮ ಅನಾವರಣಗೊಳ್ಳುವ ಪರಿ ಅದಮ್ಯವಾದುದು.ಚಿಂತೆಯೇ ಮುಪ್ಪು ಸಂತೋಷವೇ ಯೌವ್ವನ ಗಾದೆಗೆ ಪೂರಕವಾದ ಈ ಕತೆಯ ತಾತ್ವಿಕತೆಯನ್ನು ಅರ್ಥೈಸಿಕೊಂಡಾಗ ಸ್ವಸ್ಥ ಮನಸ್ಸಿನ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ.ಭೂತ ಮತ್ತು ಭವಿಷ್ಯತ್ತಿನ ಅನಗತ್ಯ ಹಂಗು ತೊರೆದು ವರ್ತಮಾನದಲ್ಲಷ್ಟೇ ಜೀವಿಸುವ ಅರಿವಿರುವವನಿಗೆ ಮಾತ್ರ ಬದುಕಿನ ನಿಜ ಸಾಕ್ಷಾತ್ಕಾರ ದಕ್ಕುತ್ತದೇ ಅಲ್ಲವೇ?

## ನೀವೂ ಬರೆಯಬಹುದು

**ಹಂಪಿ ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com, M: 94486 33038

# ಚಿತ್ರದುರ್ಗದ ಅಂತರಾಷ್ಟ್ರೀಯ ಅಂಧ ಮಹಿಳಾ ಕ್ರಿಕೆಟರ್ ವರ್ಷ

ಹಿರಿಯೂರು ತಾಲೂಕು, ಚಿತ್ರದುರ್ಗ ಜಿಲ್ಲೆಯ ಆದಿವಾಲಾ ಊರಿನ ಉಮಾಪತಿ ಮತ್ತು ಯಶೋಧ ದಂಪತಿಗಳ ಮಗಳಾಗಿ ಜನಿಸಿದ ವರ್ಷ ನಿಜಕ್ಕೂ ಜಿಲ್ಲೆಗೆ ನೀಡಿದಳು ಹರ್ಷ.

ರೈತರ ಕುಟುಂಬದಲ್ಲಿ ಜನಿಸಿದ ಇವರು ರೇಟಿನ ಪ್ರಾಬ್ಲಮ್ ನಿಂದ ಹುಟ್ಟು ಅಂಧತ್ವವನ್ನು ಸ್ವೀಕರಿಸಿದ್ದಾರೆ ಇದನ್ನು ಮೊದಲು ದೊಡ್ಡಪ್ಪ ಡಿ,ಸಿ.ಬಸವರಾಜ್ ಗುರುತಿಸಿ ಸರಿಪಡಿಸಲೇಬೇಕೆಂಬುದಾಗಿ ಪಣತೊಡುತ್ತಾರೆ ಇದಕ್ಕೆ ಸಹಕಾರಿಯಾಗಿ ಚಿಕ್ಕಪ್ಪ ನಿಜಲಿಂಗಪ್ಪ ರವರು ನಿಲ್ಲುತ್ತಾರೆ ಆದರೆ, ಸಂಪೂರ್ಣ ಗುಣಪಡಿಸಲು ಸಾಧ್ಯವಾಗದೇ ಇರುವುದು ವಿಪರ್ಯಾಸವೇ ಸರಿ. ಅಷ್ಟು ಇಷ್ಟೋ ಕಣ್ಣು ಸ್ವಲ್ಪ ದಿನದವರೆಗೆ ಕಂಡರೂ ಸಹ 10ನೇ ತರಗತಿ ಓದುವ ವೇಳೆಗಾಗಲೇ ಸಂಪೂರ್ಣವಾಗಿ ಕಣ್ಣು ತನ್ನ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ.

ಚಿಕ್ಕಪ್ಪ ಮತ್ತು ಚಿಕ್ಕಮ್ಮನ ಸಹಕಾರದಿಂದ ಪದವಿಪೂರ್ವ ಶಿಕ್ಷಣವನ್ನು ಕಲಿಯಲು ಸಹನಾ ಚಾರಿಟಬಲ್ ಟ್ರಸ್ಟ್ ಇಲ್ಲಿಗೆ ಸೇರಿಸಲಾಯಿತು. ಇಲ್ಲಿ ನರಸಿಂಹ ಸರ್ ಸಹಕಾರದಿಂದ ಬ್ರೈಲ್ ಲಿಪಿಯನ್ನು ಕಲಿಯಲು ಆರಂಭಿಸಿ ಎಲ್ಲರೂ ಕಲಿಯುವಂತಹ ಮಾಮೂಲಿ ಕಾಲೇಜಿಗೆ ಹೋಗಬೇಕಾಯಿತು ಸ್ವಲ್ಪ ಕಷ್ಟವಾದರೂ ಒಂದು ತಿಂಗಳಲ್ಲಿ ಬ್ರೈಲ್ ಲಿಪಿಯನ್ನು ಕಲಿಯುತ್ತಾರೆ ವರ್ಷ.

ಕಾಲೇಜಿನಲ್ಲಿ ಪರಿಚಯವಾದ ಸ್ನೇಹಿತೆ ಅನುರಾಧ ಇವರಿಂದ ಕ್ರಿಕೆಟ್ ತರಬೇತಿ ನೀಡುತ್ತಿದ್ದ ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೈಬಲ್ ಕ್ರಿಕೆಟ್ ಆಯ್ಕೆ ಪಾಲ್ಗೊಳ್ಳುತ್ತಾರೆ ಅಂತಿಮ ವರ್ಷದ ಬಿ,ಎ.ಪದವಿಯ ಪರೀಕ್ಷೆಗಳಿದ್ದರೂ ಸಹ ಮನೆಯವರ ಒಪ್ಪಿಗೆ ಪಡೆದು ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಅಂತಿಮವಾಗಿ ರಾಷ್ಟ್ರೀಯ ಪಂದ್ಯಾವಳಿಯಲ್ಲಿ ಭಾಗವಹಿಸುವ ತಂಡಕ್ಕೆ ಆಯ್ಕೆಗೊಳ್ಳುತ್ತಾರೆ.

ಶಿಖಾಶೆಟ್ಟಿ ತಂಡದ ಮ್ಯಾನೇಜರ್ ಇವರಿಂದ ಸಾಕಷ್ಟು ಕಲಿತಿದ್ದಲ್ಲದೆ ನಮ್ಮ ತಂದೆ ತಾಯಿಯವರಿಗೆ ಸಾಕಷ್ಟು ಧೈರ್ಯವನ್ನು ನೀಡಿ ಇವರನ್ನು ಪಂದ್ಯಗಳಿಗೆ ಕರೆದೊಯ್ಯುತ್ತಿದ್ದರು.

ಅಂಧರ ಕ್ರಿಕೆಟ್ ನಲ್ಲಿ ಬಳಸುವ ಪರಿಕರಗಳು ವಿಶಿಷ್ಟವಾಗಿದ್ದು ನನ್ನನ್ನು ಆಕರ್ಷಿಸುತ್ತಿದ್ದವು ಅವುಗಳನ್ನು ಹೆಚ್ಚಾಗಿ ಬಳಸುವ ದೃಷ್ಟಿಕೋನದಿಂದ ಅವುಗಳೊಂದಿಗೆ ವಿಶ್ವಾಸ ಬೆಳೆಸಿದೆ ಅವು ನನ್ನನ್ನು ಅಪ್ಪಿಕೊಂಡವು.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

ಸುರಾನ ಕಾಲೇಜು ಬೆಂಗಳೂರು ಇಲ್ಲಿ ಬಿ,ಎ. ಪದವಿಯನ್ನು ಪಡೆದಿರುವ ವರ್ಷ ಚಿಕ್ಕವರಿದ್ದಾಗಿನಿಂದಲೂ ವಿವೇಕಾನಂದರೆಂದರೆ ಇವರಿಗೆ ಅಚ್ಚುಮೆಚ್ಚು ಇವರಂತೆ ವಿದೇಶದಲ್ಲಿ ಭಾರತದ ಕೀರ್ತಿ ಹೆಚ್ಚಿಸಬೇಕೆಂದು ಆಸೆಯನ್ನು ಹೊತ್ತವರು.

ದೇವರ ಕೃಪೆ ಅಂತರ ರಾಷ್ಟ್ರೀಯಪಂದ್ಯಾವಳಿಯಲ್ಲಿ 2023(ನೇಪಾಳ)ರಲ್ಲಿ ಭಾಗವಹಿಸಿ ಭಾರತದ ತ್ರಿವರ್ಣ ಧ್ವಜವನ್ನು ಹಿಡಿದು ಭಾರತಮಾತೆಯ ಕೀರ್ತಿಯನ್ನು ಹೆಚ್ಚಿಸಿದೆ ಎಂದು ಗರ್ವದಿಂದ ನುಡಿಯುತ್ತಾರೆ ವರ್ಷ.




> **ಕ್ರೀಡೆಗಳಲ್ಲಿ ಸಾಧನೆಗೈದ ಸಂದರ್ಭದಲ್ಲಿ ಸರ್ಕಾರ ನಗದು ಬಹುಮಾನವನ್ನು ನೀಡಿ ಗೌರವಿಸಿದೆ ಆದರೆ ಕ್ರೀಡಾಪಟುಗಳಿಗೆ ಸರ್ಕಾರಿ ನೌಕರಿಯ ಅವಶ್ಯಕತೆ ಇದ್ದು ಕ್ರೀಡಾ ಸಾಧನೆಯ ಮಾನದಂಡವನ್ನು ಅನುಸರಿಸಿ ಹುದ್ದೆಗಳನ್ನು ನೀಡಬೇಕಾಗಿದೆ. ಪಂದ್ಯಗಳು ನಡೆಯುವ ಸಂದರ್ಭದಲ್ಲಿ ಪರೀಕ್ಷೆಗಳು ಎದುರಾದಾಗ ಸರಿಯಾಗಿ ಓದಲು ಅನುಕೂಲವಾಗದೆ ಅಂಕಗಳನ್ನು ಕಡಿಮೆ ಪಡೆಯುತ್ತೇವೆ. ನಮ್ಮ ಕ್ರೀಡಾ ಸಾಧನೆ ಮಾನದಂಡವಾದರೆ ನಮಗೆ ಉಪಯೋಗವಾಗುತ್ತದೆ. ನಮಗೂ ಕುಟುಂಬವನ್ನು ನಿರ್ವಹಿಸುವ ಜವಾಬ್ದಾರಿಗಳಿ ರುವುದರಿಂದ ಸರ್ಕಾರಿ ಹುದ್ದೆ ದೊರೆತರೆ ಆರ್ಥಿಕವಾಗಿ ಸಬಲಗೊಂಡು ಎಲ್ಲವನ್ನು ನಿರ್ವಹಿಸಲು ಸಾಧ್ಯವಾಗುತ್ತದೆ**
>
> **– ವರ್ಷ. ಚಿತ್ರದುರ್ಗ**

ಅಂತರಾಷ್ಟ್ರೀಯ ಪಂದ್ಯವನ್ನು ಗೆದ್ದು ಬಂದ ಸಂದರ್ಭದಲ್ಲಿ ಭಾರತದ ಪ್ರಧಾನಿ ಟ್ವೀಟ್ ಮಾಡುವ ಮೂಲಕ ಗೌರವಿಸಿದ್ದು,

ಕೇಂದ್ರ ಸಚಿವೆ ಸ್ಮೃತಿ ಇರಾನಿಯವರು ಔತಣ ಕೂಟವನ್ನು ಏರ್ಪಡಿಸಿ ನಮ್ಮನ್ನು ಪ್ರಶಂಸಿಸಿ "ಭೇಟಿ ಬಚಾವೋ ಭೇಟಿ ಪಡಾವೋ" ಬ್ರಾಂಡ್ ಅಂಬಾಸಿಡರ್ ಮಾಡುವುದಾಗಿ ತಿಳಿಸಿದ್ದು ನಮ್ಮಲ್ಲಿ ಇಂದಿಗೂ ಸಿಹಿ ನೆನಪು ಮಹಿಳಾ ತಂಡದ ಏಬಲ್ ಕ್ರೀಡಾಪಟುಗಳನ್ನು ಭೇಟಿ ಮಾಡಿದ್ದು ಕೂಡ ಸ್ಮರಣೀಯ.

ಗೌರವಾನ್ವಿತ ಕೃತಿಕಾ ಚಾರ್ವೆ, ರಾಜಶ್ರೀ, ಡೇವಿಡ್, ಧೀರಜ್, ಮಹಾಂತೇಶ್, ಲೋಕೇಶ್, ಪ್ರಕಾಶ್, ಸುನಿಲ್, ಜವರೇಗೌಡ, ಚಂದ್ರಕಾಂತ್ ಮತ್ತು ನೇತ್ರ ಇವರೆಲ್ಲರ ಸಹಕಾರ ಇವರೊಂದಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ನಾನು ಚಿರಋಣಿ ಎನ್ನುತ್ತಾರೆ ವರ್ಷ.

ಇವರ ಸಾಧನೆಗಳನ್ನು ಗುರುತಿಸಿ ಪ್ರಜಾವಾಣಿ ದಿನಪತ್ರಿಕೆ ಯವರು 2024ರ ಪ್ರಜಾವಾಣಿ ಸಾಧಕಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ರಾಜ್ಯಪಾಲರು ರಾಜಭವನದಲ್ಲಿ ಕರೆಯಿಸಿ ಗೌರವಿಸಿದ್ದಾರೆ ಮತ್ತು ಚಿತ್ರದುರ್ಗ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯನ್ನು 2023ರಲ್ಲಿ ನೀಡಿ ಜಿಲ್ಲಾಡಳಿತ ಗೌರವಿಸಿದೆ.

ಯುವ ಪೀಳಿಗೆಗೆ ಯಾವುದೇ ಕಾರಣಕ್ಕೂ ಖಿನ್ನತೆಗೊಳಗಾಗಬೇಡಿ ಸಾಧನೆಗೆ ಸಾಕಷ್ಟು ಅವಕಾಶವಿದೆ ತೊಂದರೆಗಳನ್ನು ಸ್ವೀಕರಿಸುವ ಗುಣವನ್ನು ಬೆಳೆಸಿಕೊಳ್ಳಿ ಅದರೊಂದಿಗೆ ಬದುಕಲು ಕಲಿಯಿರಿ ಆಗ ಮಾತ್ರ ಸಾಧನೆ ಸಾಧ್ಯ ಇದನ್ನು ಎಲ್ಲರೂ ಅನುಸರಿಸಿ ಎಂಬ ಕಿವಿ ಮಾತನ್ನು ಹೇಳುತ್ತಾರೆ ವರ್ಷ.

ನನ್ನ ಬೆಳವಣಿಗೆಗೆ ಕಾರಣರಾದ ಸಮರ್ಥನಂ ಟ್ರಸ್ಟ್,ನನ್ನೆಲ್ಲಾ ಕುಟುಂಬ ವರ್ಗದವರು,ತರಬೇತುದಾರರು ಹಾಗೂ ಸ್ನೇಹಿತರಿಗೆ ನಾನು ಚಿರಋಣಿ ಎಂದು ನುಡಿಯುತ್ತಾರೆ ವರ್ಷ. ಮೊದಮೊದಲು ತಂಡದ ನಾಯಕಿಯಾಗಿದ್ದಾಗ ಭಯಪಟ್ಟುಕೊಂಡಿದ್ದೆ ಆದರೆ ತರಬೇತುದಾರರು ಹಾಗೂ ತಂಡದ ಇತರೆ ಆಟಗಾರರ ಸಹಕಾರದಿಂದ ಯಶಸ್ವಿಯಾದೆ ಎಂದು ಹೇಳುತ್ತಾರೆ ವರ್ಷಗೆ ಭವಿಷ್ಯದ ಕನಸುಗಳು ನನಸಾಗಿಲಿ, ದೇಶಕ್ಕೆ ಕೀರ್ತಿ ತರುವಂತಾಗಲಿ.

### ಕ್ರೀಡಾ ಸಾಧನೆಗಳು

1. 2019(ನವದೆಹಲಿ)ರಾಷ್ಟ್ರೀಯ ಅಂಧರ ಮಹಿಳಾ ಕ್ರೀಡಾಕೂಟದಲ್ಲಿ ರನ್ನರ್ಸ್.
2. 2022 ಬೆಂಗಳೂರು ರಾಷ್ಟ್ರೀಯ ಅಂಧರ ಮಹಿಳಾ ಕ್ರೀಡಾಕೂಟ ವಿನ್ನರ್ಸ್.
3. 2023 ಬೆಂಗಳೂರು ರಾಷ್ಟ್ರೀಯ ಅಂಧರ ಮಹಿಳಾ ಕ್ರೀಡಾಕೂಟ (ತಂಡದ ನಾಯಕಿ)13 ಎಸೆತದಲ್ಲಿ 50 ರನ್ ಗಳಿಸಿದ್ದರು.

2022-2023 ರಲ್ಲಿ ಅಂತರಾಷ್ಟ್ರೀಯ ಮಟ್ಟಕ್ಕೆ ಭಾಗವಹಿಸುವ ಕ್ರಿಕೆಟ್ ತಂಡದ 38 ಆಟಗಾರರಲ್ಲಿ ಭೂಪಾಲ್ ನಲ್ಲಿ 05 ದಿನ ತರಬೇತಿ ಜೊತೆಗೆ ಆಯ್ಕೆ ಪ್ರಕ್ರಿಯೆ ನಡೆದು ಭಾರತ ತಂಡಕ್ಕೆ ಇವರು ಆಯ್ಕೆಗೊಳ್ಳುತ್ತಾರೆ.

1. 2023 ನೇಪಾಳದಲ್ಲಿ ನಡೆದ ಅಂತರರಾಷ್ಟ್ರೀಯ ಅಂಧರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ತೋರಿಸಿರುತ್ತಾರೆ.
2. 2023 ಇಂಗ್ಲೆಂಡ್ನಲ್ಲಿ ನಡೆದ ಐ,ಬಿ,ಎಸ್,ಎ. ಅಂಧರ ವಿಶ್ವ ಕ್ರಿಕೆಟ್ ಚಾಂಪಿಯನ್ಶಿಪ್ ತಂಡದ ನಾಯಕಿಯ ಜವಾಬ್ದಾರಿಯೊಂದಿಗೆ ವಿನ್ನರ್ಸ್.
3. ಇಂಡಿಯಾ ಮತ್ತು ನೇಪಾಳ ಅಂತರಾಷ್ಟ್ರೀಯ ಬೈ ಲ್ಯಾಟರಲ್ ಸೀರೀಸ್ ನಲ್ಲಿ 5 ಪಂದ್ಯಾವಳಿಯಲ್ಲಿ 04 ಪಂದ್ಯವನ್ನು ಗೆದ್ದು ತಂಡದ ಗೆಲುವಿಗೆ ಆಟಗಾರ್ತಿ ಹಾಗೂ ನಾಯಕಿಯಾಗಿ ಕೊಡುಗೆ ನೀಡಿದ್ದಾರೆ ವರ್ಷ.

# ಹೂವಾಗಿ ಅರಳುವ ಮುಂಚೆ ಬಾಡಿತೇ?

ಆಧುನಿಕ ಸಮಾಜದಲ್ಲಿ ಹೆಣ್ಣು-ಗಂಡಿಗೆ ಶಕ್ತಿ ಸಾಮರ್ಥ್ಯಗಳು ಒಂದೇಆಗಿದ್ದರು, ಸಾಮಾಜೀಕರಣದಿಂದಾಗಿ ಬೇರೆ ಬೇರೆ ಆಗಿ ನಿಂತಿವೆ. ಅದು ಹೇಗೆಂದರೆಗಂಡಿಗೆ ಸಮಾಜದಲ್ಲಿ ಹೆಣ್ಣಿನ ವಿರುದ್ಧದಮನ, ಅನ್ಯಾಯಗಳಿಗೆ ಅವಕಾಶ ಮಾಡಿಕೊಟ್ಟಿದ್ದರೆ ಹೆಣ್ಣಿಗೆತನ್ನ ಪ್ರಾಣ, ಸೊತ್ತು, ಮತ್ತು ಮಾನವನ್ನುರಕ್ಷಿಸಲು ಬೇಕಾಗುವಂತ ಹಕ್ಕುಗಳಿಂದ ವಂಚಿತಳನ್ನಾಗಿಸಿದೆ.ಇದಕ್ಕೆ ಹೆಣ್ಣಿನ ಲೈಂಗಿಕತೆ, ಲೈಂಗಿಕ ಚಲನಶೀಲತೆ, ಶೀಲ, ಪಾವಿತ್ರ್ಯತೆಗಳೆಂಬ ಸಾಮಾಜೀಕರಣದ ಮೂಲಕ ಪ್ರಕೃತಿ ಸಹಜವಾದ ಲೈಂಗಿಕತೆಯನ್ನು ನಿರ್ಬಂಧಿಸಿರುವುದು ಕಂಡು ಬಂದರೆ, ಮತ್ತೊಂದುಕಡೆ ಹೆಣ್ಣು ಮಕ್ಕಳು ದೌರ್ಜನ್ಯ, ಶೋಷಣೆ, ಹಿಂಸೆ, ಕಿರುಕುಳ, ಅತ್ಯಾಚಾರ, ತಾರತಮ್ಯಕ್ಕೆ ಏಕೆಒಳಗಾಗುತ್ತಿದ್ದಾರೆ.ಹೆಣ್ಣು ಮಕ್ಕಳು ಅನೇಕ ಸಾಮಾಜಿಕ ಸವಲತ್ತುಗಳಿಂದ ಏಕೆ ವಂಚಿತರಾಗುತ್ತಿದ್ದಾರೆ? ಹೆಣ್ಣು ಮಕ್ಕಳನ್ನು ಏಕೆ ಸಾಂಸ್ಕೃತಿಕ ಪ್ರತಿಯಾಗಿ, ಮತ್ತುಪ್ರಕೃತಿಯಜೊತೆ ಸಮೀಕರಸಲಾಗಿದೆ. ಹೆಣ್ಣು ಮಕ್ಕಳಿಗೆ ಸಾರ್ವಜನಿಕ ವಲಯವನ್ನು ಪ್ರವೇಶಿಸಲು ಇವತ್ತಿಗೂ ಸಾಧ್ಯವಾಗಿಲ್ಲ ಈ ಮುಂತಾದಪ್ರಶ್ನೆಗಳನ್ನು ಅವಲೋಕಿಸಿದರೆ, ಮೂಲತಃದಲ್ಲಿ ಕುಟುಂಬ ಮತ್ತು ಸಮಾಜದಲ್ಲಿ ಇರುವ ಸಾಮಾಜೀಕರಣ ಸಮಸ್ಯೆಇರುವುದರಿಂದಇದಕ್ಕೆಲ್ಲಕಾರಣ.



ಡಾ.ಸುಮಲತ ಬಿ.ಎಂ.
ಲೇಖಕರು, ಹೊಸಪೇಟೆ

Hampi Times E-paper
SCAN AND READ

ಹೆಣ್ಣುಎಂದರೆ ಹೂ, ಕೋಮಲೆ, ಮೃದು ಸ್ವಭಾವದಳು, ಸಹನಮಯಿ ಎಂದು ಎಲ್ಲರೂ ಹೇಳಿ ಹೇಳಿ ಅವಳನ್ನು ತುಂಬಾ ಮೃದುವಾಗಿ ಬೆಳೆಸುವ ಕುಟುಂಬ ಮತ್ತು ಪೋಷಕರು. ಅವಳು ಹೊರಗಡೆ ಹೊರಟಾಗ ಸಮಸ್ಯೆಗಳನ್ನು ಯಾವರೀತಿ ಎದುರಿಸಬೇಕು ಎಂತವರ ಜೊತೆ ಸ್ನೇಹ ಮಾಡಬೇಕು ಎಂದುಯಾಕೆ ಮಗಳಿಗೆ ಮನವರಿಕೆ ಮಾಡುವುದಿಲ್ಲ? ಸಮಸ್ಯೆಗಳು ಬಂದಾಗ ಧೈರ್ಯವಾಗಿ ಎದುರಿಸುವ ಮನೋಬಲವನ್ನು ಪೋಷಕರು, ಕುಟುಂಬ, ಶಿಕ್ಷಕರು ತುಂಬಬೇಕು. ಯಾವುದು ತಪ್ಪುಯಾವುದು ಸರಿಎಂದು ಹರೆಯದ ಸಮಯದಲ್ಲಿ ಮಕ್ಕಳಿಗೆ ಗೊತ್ತಿರುವುದಿಲ್ಲ ಅದನ್ನು ಹೇಳಬೇಕಾಗಿರುವುದು ನಮ್ಮಜವಬ್ದಾರಿ. ಮಕ್ಕಳನ್ನು



ಸ್ನೇಹಿತರಾಗಿ ಕಂಡು ಅವರ ಮನಸಿನ ಮಾತನ್ನು ನಮ್ಮ ಜೊತೆ ಮುಕ್ತವಾಗಿ ಹೇಳುವಂತ ಮನೋಭಾವ ಬೆಳೆಸಿಕೊಂಡರೆ ಎಷ್ಟೊ ಸಮಸ್ಯೆಗಳಿಗೆ ಪರಿಹಾರ ಸಿಕ್ಕಂತೆ.ನಮ್ಮ ಸುತ್ತಲಿನ ಹೆಣ್ಣುಮಕ್ಕಳಿಗೆ ಬದುಕು ಕಟ್ಟಿಕೊಳ್ಳುವ ರೀತಿಯಲ್ಲಿ, ದೌರ್ಜನ್ಯವನ್ನು ಪ್ರಶ್ನಿಸುವ ದಿಸೆಯಲ್ಲಿಧೈರ್ಯತುಂಬುವ ಕೆಲಸವನ್ನು ನಾವು ಮಾಡಬೇಕಾಗಿದೆ.

ಪ್ರೀತಿಎಂದರೆ ನಂಬಿಕೆ, ಆ ನಂಬಿಕೆ ಮುರಿದರೆ ಆ ಪ್ರೀತಿಯಿಂದದೂರವಾಗುವ ಅನಿವಾರ್ಯ ಬರುತ್ತದೆ. ದೂರವಾದ ಕಾರಣಕ್ಕೆ ಕೊಲೆ ಮಾಡುತ್ತಾ ಹೋದರೆ ಭೂಮಿಯ ಮೇಲೆ ಬದುಕುವುದಕ್ಕಿಂತ ಸಾಯುವವರೇ ಜಾಸ್ತಿ ಆಗುತ್ತಿದ್ದರು. ಒಬ್ಬಯುವಕಒಂದು ಹುಡುಗಿಯನ್ನು ಪ್ರೀತಿಸಿದ ಕೂಡಲೆ ಅವಳು ಅದನ್ನು ಒಪ್ಪಲೇಬೇಕೆ? ಒಂದು ವೇಳೆ ಒಪ್ಪಿಕೊಂಡ ಮೇಲೆ ಹೊಂದಾಣಿಕೆ ಆಗುತ್ತಿಲ್ಲ ಎನಿಸಿದರೆ ಹೊರಬರುವದಾರಿಯೇಇಲ್ಲವೇ? ದೈಹಿಕ ಸಂಬಂಧಕ್ಕೆ ನಿರಾಕರಿಸಿದರೆ ಆಕೆಯ ಮಾತಿಗೆ ಮನ್ನಣೆಯೇ ಇಲ್ಲದಿದ್ದರೆ ಬೆದರಿಕೆ, ದೌರ್ಜನ್ಯ, ಕಗ್ಗೊಲೆ, ಮಾನಹಾನಿ, ತೇಜೋವದೆ, ಆಸಿಡ್ ದಾಳಿಯಂತಹ ಬೇರೆ ಬೇರೆ ರೂಪಗಳಲ್ಲಿ ಹೆಣ್ಣು ಮಕ್ಕಳ ಅಸ್ತಿತ್ವವನ್ನೇ ಚಿವುಟಿ ಹಾಕುತ್ತಿವೆ. ಇದಕ್ಕೆ ನಾವು ಗಂಡು ಮಕ್ಕಳಿಗೆ ಕುಟುಂಬ ಒಳ್ಳೇಯ ಸಂಸ್ಕಾರ, ಹೆಣ್ಣು ಮಕ್ಕಳಿಗೆ ಗೌರವಕೊಡುವುದು, ಬೇರೆ ಹೆಣ್ಣು ಮಕ್ಕಳು ನಮ್ಮ ಮನೆಯ ಹೆಣ್ಣು ಮಕ್ಕಳು ಇದ್ದ ಹಾಗೆ ಅವರನ್ನು ಗೌರವದಿಂದಕಾಣಬೇಕು ಎನ್ನುವ ಮನೋಭಾವ ಚಿಕ್ಕವರಾಗಿದ್ದಾಗಲೆ ಕಲಿಸಬೇಕು. ಆಗ ಸಮಾಜ ಒಚಿದು ರೀತಿಯ ಬದಲಾವಣೆ ಕಾಣಲು ಸಾಧ್ಯ.

ಈ ಯುಗದಲ್ಲಿ ಮಕ್ಕಳು ಮೊಬೈಲ್ ಫೋನ್‌ಗಳ ಬಳಕೆ ಅತಿ ಹೆಚ್ಚಾಗಿರುವುದರಿಂದ ದಿಢೀರನೆ ಅರಳುವ ಪ್ರೇಮ, ಅದನ್ನು ನಿರ್ವಹಿಸಲು ಬೇಕಾದ ಪ್ರಬುದ್ಧತೆ ಇಲ್ಲದಿರುವುದು, ಮಕ್ಕಳ ವಯೋಸಹಜ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲಾಗದ ಪೋಷಕರು ಮತ್ತು ಸಮಾಜ, ಮಕ್ಕಳ ದುಡುಕು ಪ್ರವೃತ್ತಿ, ಹೆಣ್ಣುಮಕ್ಕಳ ಜೊತೆ ಹೇಗೆ ಬೇಕಾದರೂ ನಡೆದುಕೊಳ್ಳಬಹುದು ಎಂಬ ತಾತ್ಸರ ಮನೋಭಾವ, ಸಾಮಾಜಿಕ ಜಾಲತಾಣಗಳು ಎಲ್ಲವೂ ಈ ಬಗೆಯ ದುಷ್ಕೃತಗಳಿಗೆ ದಾರಿ ಮಾಡಿಕೊಟ್ಟಿವೆ. ಮಕ್ಕಳು ಮೊಬೈಲ್ ಬಳಸುವಾಗ ಪೋಷಕರ ಗಮನ ಮಕ್ಕಳ ಮೇಲಿರಲಿ, ಮನೆಗೆ ಬರುವ ಮತ್ತು ಹೋಗುವ ಸಮಯಗೋತ್ತಿರಲಿ, ಸ್ನೇಹ ಬಳಗ ಹೇಗಿದೆಎಂದು ನಮ್ಮಗಮನದಲ್ಲಿಇರಲಿ.

ಇತ್ತೀಚೆಗೆ ನಡೆದಿರುವ ಘಟನೆಗಳನ್ನು ಆಧಾರಿಸಿ ಹೆಣ್ಣುಮಕ್ಕಳನ್ನು ಪದವಿ ಶಿಕ್ಷಣ ಕೊಡಿಸಲು ಎಷ್ಟೋಗ್ರಾಮೀಣ ಮತ್ತು ಬಡ ಕುಟುಂಬಗಳು ಹಿಂದೇಟು ಹಾಕುತ್ತಿವೆ. ಈಗಿನ ನ್ಯೂಸ್‌ಗಳನ್ನು ಕೇಳಿದರೆ ಮಕ್ಕಳನ್ನು ಹೊರಗೆ ಕಳಿಸೋಕೆ ಭಯವಾಗುತ್ತದೆ. ಹೊರೆಗೆ ಹೋದ ಮಕ್ಕಳಿಗೆ ಏನಾದರೂಆದರೆ ಏನು ಮಾಡುವುದು? ನಾವು ಬಡವರು, ಕಷ್ಟಪಟ್ಟು ಮಕ್ಕಳನ್ನು ಬೆಳೆಸಿದ್ದೇವೆ. ಹೇಗಾದರೂ ಸರಿ ಅವರು ಮನೆಗೆ ಸುರಕ್ಷಿತವಾಗಿ ಇದ್ದರೆ ಸಾಕು ಎನ್ನುವ ದನಿ ತಂದೆ ತಾಯಿಗಳಲ್ಲಿ ಕೇಳಿ ಬರುತ್ತಿದೆ.

ಆತ್ಯಾಚಾರ, ದೌರ್ಜನ್ಯ, ಕೊಲೆ ನಡೆದಾಗ ಸಮಾಜ ಮತ್ತು ಸುತ್ತಲಿನ ಜನಗಳು ಮೊಬೈಲ್ ನಲ್ಲಿ ಸ್ಟೆಟಸ್‌ಗಳನ್ನು ಹಾಕಿಕೊಂಡು ನ್ಯಾಯಕೊಡಿಸಬೇಕುಎಂದು ಹೇಳುವುದು ಯಾವರೀತಿಯಲ್ಲಿ ಸರಿ? ಈ ಹೋತ್ತಿನಲ್ಲೂಕೂಡ ಹೆಣ್ಣುಮಕ್ಕಳನ್ನೇ ಕೂರಿಸಿಕೊಂಡು ಮತ್ತೆ ಅದೇ ಬುದ್ಧಿ ಮಾತು ಕೇಳಿಬರುತ್ತದೆ ಒಬ್ಬರೇ ಓಡಾಡಬಾರದು, ಫೇಸ್‌ಬುಕ್ ಅಕೌಂಟ್ ಇಟ್ಟುಕೊಳ್ಳಬಾರದು, ಗೆಳೆತನ ಮಾಡಬಾರದು ಎಂಬಂತಹ ಒತ್ತಡಗಳನ್ನು ಹೇರುತ್ತೇವೆಯೇ ಹೊರತು, ಹೆಣ್ಣುಮಕ್ಕಳನ್ನು ವಸ್ತುವನ್ನಾಗಿ ನೋಡುವ, ಮನ ಬಂದಂತೆ ಹಲ್ಲೆ, ದೇಹವನ್ನೇ ಮಾತ್ರದೃಷ್ಟೀಕೋನದಲ್ಲಿ ಇಟ್ಟುಕೊಂಡು ನೋಡುವ ಚಿಂತಾನ ಕ್ರಮವನ್ನು ನಾವು ಏಕೆ ಪ್ರಶ್ನೇ ಮಾಡುವುದಿಲ್ಲ. ಜನರು ಹೋರಾಟಗಳನ್ನು ಮಾಡಿ ಆರೋಪಿಗಳಿಗೆ ಶಿಕ್ಷೆಯಾಗುವಂತೆ ಮಾಡಬೇಕು. ಆದರೆ ನಮ್ಮ ಗಮನ ಇಂತಹ ಪ್ರಕರಣಗಳು ನಡೆದಾಗೆಲ್ಲ ಮುದುಡುವ ಹೆಣ್ಣುಮಕ್ಕಳ ಬದುಕನ್ನು ಮತ್ತು ಮನಸನ್ನು ಅರಳಿಸುವ ಕಡೆಗೆ ಇರಬೇಕು. ಭೀತರಾದ ಅವರಲ್ಲಿ ಮತ್ತು ಪೋಷಕರಲ್ಲಿ ಧೈರ್ಯತುಂಬುವ ಕೆಲಸ ಮಾಡಬೇಕು. ಅವರ ಬದುಕನ್ನು ಮತ್ತಷ್ಟು ಮುದುಡಿಸುವ ಕ್ರಮಗಳು ದೌರ್ಜನ್ಯ ಮಾಡುವ ಮನಃಸ್ಥಿತಿಗೇ ಇನ್ನಷ್ಟು ಬಲ ಹೆಚ್ಚಾಗುವಂತೆ ಮಾಡಬಾರದು.ನಾವು ಸುತ್ತಲಿನ ಹೆಣ್ಣುಮಕ್ಕಳಿಗೆ ಬದುಕು ಕಟ್ಟಿಕೊಳ್ಳುವ ರೀತಿಯಲ್ಲಿ, ಅವರ ಮೇಲೆ ನಡೆಯುವ ದೌರ್ಜನ್ಯವನ್ನು ಧೈರ್ಯವಾಗಿ ಪ್ರಶ್ನೆ ಮಾಡುವ ಕೆಲಸ ಮಾಡಬೇಕಾಗಿದೆ.

## ಕವಿ ಮನಸು

### ಮುಗಿಲು




ನೀಲಿ ಮುಗಿಲ
ಹನಿಯು ಬಂದು, ಭುವಿ
ಹಸಿರಾಗಿದೆ!

ಮೋಡ ಕವಿದು
ಭಾರವಾಗಿ ಇಳೆಗೆ
ಜಾರಿ ಬಂದಿದೆ!

ಬಾನು ಭುವಿಯ
ಸ್ನೇಹವಾಗಿ ಒಲವ
ಮಳೆಯಾಗಿದೆ!

ಇಳೆಗೆ ಬಂದ
ಮಳೆಹನಿ ರೈತನ
ಮನ ಗೆದ್ದಿದೆ..!!

ಕಾಡಜ್ಜಿ ಮಂಜುನಾಥ

## ನೋ ಎಂದು ಹೇಳಿ

ಇಂದಿನ ಪೀಳಿಗೆಯ ಪೋಷಕರ ಮಾತು, ನಮ್ಮ ಮಕ್ಕಳಿಗೆ ಯಾವುದೇ ಕುಂದು ಕೊರತೆ ಇಲ್ಲದ ಹಾಗೆ ಇಡೀ ಬದುಕನ್ನು ಬದುಕಬೇಕು. ಅವರು ಕೇಳಿದ ಎಲ್ಲವನ್ನೂ, ಕೇಳಿದ ಆ ಕ್ಷಣವೇ ಅವರ ಮುಂದೆ ಇರುತ್ತೆ.ನಾವು ಪಟ್ಟ ಕಷ್ಟ ಯಾವ ಕಾರಣಕ್ಕೂ ಅವರು ಅನುಭವಿಸಬಾರದು.

ಒಮ್ಮೆ ಯೋಚಿಸಿ ನಾವು ಕೇಳಿದ ಎಷ್ಟು ವಸ್ತು ಅಥವಾ ವಿಷಯದಲ್ಲಿ, ನಮ್ಮ ಪೋಷಕರು ಸಮ್ಮತಿಸುತ್ತಾರೆ. ಹತ್ತು ವಿಷಯದಲ್ಲಿ ಒಂದು ನೆರವೇರಿದರೆ ಅದು ಅದ್ಭುತವೇ ಸರಿ. ಹಾಗೆ ಕೇಳಿ ಪಡೆದ ವಸ್ತುವನ್ನು ಎಷ್ಟು ಜೋಪಾನವಾಗಿ ನೋಡಿ ಕೊಂಡಿರುತ್ತೇವೆ . ಜೀವನದಲ್ಲಿ ಎಲ್ಲವೂ ಸುಲಭಕ್ಕೆ ಸಿಗುವುದಿಲ್ಲ, ದೊಡ್ಡವರಾದ ನಂತರ ಅದು ಎಷ್ಟೋ ವಿಷಯಗಳಲ್ಲಿ ಅಂದುಕೊಂಡಂತೆ ಆಗದೆ ಇದ್ದರು, ಅದು ನಮ್ಮನ್ನು ಯಾವ ರೀತಿಯಲ್ಲೂ ಕುಗ್ಗಿಸಲಿಲ್ಲ!

ಇಷ್ಟು ದೊಡ್ಡ ಜೀವನದ ಪಾಠವನ್ನು ಪ್ರೀತಿ, ಕಾಳಜಿ ಹೆಸರಲ್ಲಿ ನಮ್ಮ ಮಕ್ಕಳನ್ನು ನಾವೇ ನಿಶಕ್ತರಾಗಿ, ಸೋಲು ಅಥವಾ ಆಸೆ ಪಟ್ಟಂತೆ ನಡೆಯದೆ ಹೋದಾಗ ಅದನ್ನು ತಾಳುವ ತಾಳ್ಮೆಯಿಲ್ಲದೆ ದುಡುಕುವ ಪೀಳಿಗೆಗೆ ಕಾರಣವಾಗಿದ್ದೇವೆ.

ಮಕ್ಕಳು ಅತ್ತರು, ಬೇಸರ ಮಾಡಿಕೊಂಡರು ಪರವಾಗಿಲ್ಲ. ಅವರಿಗೆ ಎಲ್ಲವನ್ನೂ ಹೆದರಿಸುವ ಮನೋಭಾವ ಬರಬೇಕಾದರೆ, ನಾವು ಕೆಲವು ವಿಷಯದಲ್ಲಿ ನೋ ಎಂದು ಹೇಳಲೇಬೇಕು.

– ಮಂಜುಶ್ರೀ ಮುರಳೀಧರ್.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಶ್!!.....ಯಾರಿಗೂ ಹೇಳಬೇಡ!!

ಘಟನೆ ಒಂದು..... ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಚಾಕ್ಲೇಟ್ ಕೊಡುತ್ತೇನೆ ಎಂದು ಪಕ್ಕದ ಮನೆಯ ಪುಟ್ಟ ಹುಡುಗಿಗೆ ಆಸೆ ತೋರಿಸಿ ಪೈಶಾಚಿಕ ಕೃತ್ಯ ಎಸಗಿದ ಯುವಕ.

ಘಟನೆ ಎರಡು.... ಹೊರಗೆ ಸುತ್ತಾಡಿಸಿಕೊಂಡು ಬರುತ್ತೇನೆ ಎಂದು ಸಂಬಂಧಿಕರ ಅಬೋಧ ಮಕ್ಕಳ ಮೇಲೆ ಅಮಾನುಷ ಅತ್ಯಾಚಾರ.

ಘಟನೆ ಮೂರು.... ಪಾಠ ಹೇಳುವ ನೆಪದಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ

ಘಟನೆ ನಾಲ್ಕು.... ಗಂಡು ಹುಡುಗ ಎಂದು ಗೊತ್ತಿದ್ದು ಕೂಡ ಆತನನ್ನು ತಮ್ಮ ಕಾಮಪಿಪಾಸೆಗೆ ಬಳಸಿಕೊಂಡ ವಯಸ್ಕ. ಹೀಗೆ ಹತ್ತು ಹಲವು ದುರ್ಘಟನೆಗಳನ್ನು ಪ್ರಪಂಚದ ಒಂದಲ್ಲ ಒಂದು ಭಾಗದಲ್ಲಿ ನಡೆಯುವುದನ್ನು ಕಾಣುತ್ತೇವೆ.

ನಮ್ಮ ಮಕ್ಕಳನ್ನು ಅವರು ತುಂಬಾ ಪ್ರೀತಿಸ್ತಾರೆ ಎಂಬ ಭಾವದಿಂದ ಪರರನ್ನು ಸಂಪೂರ್ಣವಾಗಿ ನಂಬುವ ಎಷ್ಟೋ ಜನ ಪಾಲಕರು ಏನಾದರೂ ತಪ್ಪು ನಡೆದಾಗ ಅದನ್ನು ಹೇಳಲಾಗದೆ ತಮ್ಮ ಮಕ್ಕಳು ಒದ್ದಾಡಿ ಪದಗಳಿಗಾಗಿ ತಡಕಾಡಿ ಕೊನೆಗೆ ಹೇಳಿದಾಗ ತಮ್ಮ ಮಕ್ಕಳಿಗೆ ಹೇಳುವುದು ಶ್...! ಯಾರಿಗೂ ಹೇಳಬೇಡ!! ಎಂದು.

ಅದೆಷ್ಟು ಬಾರಿ ತಾಯಂದಿರು ತಮ್ಮ ಮಕ್ಕಳಿಗೆ ಈ ರೀತಿ ಹೇಳುವುದಿಲ್ಲ. ನಮ್ಮ ಸಮಾಜದಲ್ಲಿ ಆಳದಲ್ಲಿ ಗಮನಿಸಿದಾಗ ಕೆಲ ವಿಷಯಗಳು ಸರಿಯಾಗಿರದಿದ್ದರೂ ಕೂಡ ಮೇಲ್ನೋಟಕ್ಕೆ ಎಲ್ಲವೂ ಸರಿಯಾಗಿದೆ ಎಂಬಂತೆ ತೋರಿಸಿಕೊಳ್ಳುತ್ತೇವೆ. ಇದರ ಅವಶ್ಯಕತೆ ಇದೆಯೇ? ಎಂಬುದನ್ನು ಯೋಚಿಸಬೇಕು.

ಕೆಲ ವರ್ಷಗಳ ಹಿಂದೆ ಬೆಂಗಳೂರಿನ ಪ್ರತಿಷ್ಠಿತ ಶಾಲೆಯೊಂದರಲ್ಲಿ ಪುಟ್ಟ ಮಗುವಿಗೆ ಹೀಗಾದಾಗ ಎಚ್ಚೆತ್ತ ಪಾಲಕರು ಶಾಲೆಯ ಆಡಳಿತ ಮಂಡಳಿಯ ವಿರುದ್ಧ ದೂರು ನೀಡಿದರು.ಅದೇ ಸಮಯದಲ್ಲಿಯೇ ದೇಶಾದ್ಯಂತ ಅಲ್ಲಲ್ಲಿ ನಡೆದ ಪ್ರಕರಣಗಳು ಬಯಲಿಗೆ ಬಂದು ಪುಟ್ಟ ಮಕ್ಕಳಿಗೆ ಸುರಕ್ಷತೆಯ ಪಾಠವನ್ನು ಹೇಳಿಕೊಡುವ ಕುರಿತ ಚರ್ಚೆ ಎಲ್ಲೆಡೆ ನಡೆಯಿತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಆದರೂ ಕೂಡ ಅಲ್ಲೊಂದು ಇಲ್ಲೊಂದು ಇಂತಹ ಪ್ರಕರಣಗಳು ಕೇಳಿ ಬರುತ್ತಲೇ ಇವೆ. ಇದಕ್ಕೆ ಕಾರಣ ಪಾಲಕರ ಸಂಕೋಚದ ಮನಸ್ಥಿತಿ. ಅಯ್ಯೋ ಇಂತಹದನ್ನೆಲ್ಲ ಮಕ್ಕಳಿಗೆ ಹೇಗೆ ಹೇಳಬೇಕು ಎಂದು ಕೆಲವರು ಹೇಳಿದರೆ,ಮತ್ತೆ ಕೆಲವರು ಅವರ ಶಾಲೆಗಳಲ್ಲಿ ಹೇಳಿಕೊಡುತ್ತಾರೆ ಬಿಡಿ ಎಂಬ ಉದಾಸೀನ ಪ್ರವೃತ್ತಿ.

ಮಕ್ಕಳಿಗೆ ನೀವು ಹೇಗೆ ಹೇಳಿಕೊಡಬೇಕು ಎಂದು ಪಾಲಕರು ಸಂಕೋಚ ಪಡುವುದಾದರೆ ನೀವಲ್ಲದೆ ಮತ್ತಾರು ಹೇಳಿಕೊಡಬೇಕು ಎಂಬುದು ನನ್ನ ಪ್ರಶ್ನೆ? ಮಕ್ಕಳಿಗೆ ಅರ್ಥವಾಗುವ ಸಹ್ಯ ಭಾಷೆಯಲ್ಲಿ ಹೇಳಿಕೊಡುವುದರ ಮೂಲಕ ಅವರ ಮೇಲಾಗುವ ದೌರ್ಜನ್ಯಗಳ ಕುರಿತು ಅವರು



ಮುಕ್ತವಾಗಿ ಮಾತನಾ ಡುವಂತೆ, ಎಚ್ಚರಿಕೆ ವಹಿಸುವಂತೆ ಮಾಡುವ ಮೂಲಕ ಅವರ ಬಾಲ್ಯ ಜೀವನವನ್ನು ಸುರಕ್ಷಿತಗೊಳಿಸಬೇಕು.

ಖ್ಯಾತ ಹಿಂದಿ ಚಲನಚಿತ್ರ ನಟ ಅಮೀರ್ ಖಾನ್ ನಡೆಸಿಕೊಡುತ್ತಿದ್ದ ಸತ್ಯಮೇವ ಜಯತೆ ಕಾರ್ಯಕ್ರಮದಲ್ಲಿ ಮಕ್ಕಳ ಮೇಲಾಗುತ್ತಿರುವ ಲೈಂಗಿಕ ಕಿರುಕುಳಗಳ ವಿರುದ್ಧ ಮಕ್ಕಳು ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ವಿವರಿಸಿದ್ದರು

ಅತ್ಯಂತ ಸರಳವಾಗಿ ತಂದೆ ತಾಯಿಯನ್ನು ಹೊರತುಪಡಿಸಿ ಮಕ್ಕಳ ಎದೆಯ ಭಾಗ, ಪೃಷ್ಟದ ಭಾಗ ಮತ್ತು ಎರಡು ಕಾಲುಗಳ ನಡುವಿನ ಭಾಗಗಳನ್ನು ವೈಯುಕ್ತಿಕ ಅಂಗಗಳು (ಪ್ರೈವೇಟ್ ಪಾರ್ಟ್ಸ್) ಎಂದು ತಿಳಿ ಹೇಳಿ, ಸ್ನಾನ ಮಾಡಿಸುವ ಸಮಯದಲ್ಲಿ ತಂದೆ ತಾಯಿಯ ಹೊರತಾಗಿ ಬೇರೆಯವರು ಆ ಭಾಗವನ್ನು ಮುಟ್ಟುವ ಇಲ್ಲವೇ ಸವರುವ ಪ್ರಸಂಗದಲ್ಲಿ ಕೂಡಲೇ ಆ ಜಾಗದಿಂದ ಬಹಳಷ್ಟು ಜನರಿರುವ ಕಡೆ ಓಡಿ ಹೋಗಲು ಹೇಳಿ ಕೊಟ್ಟರು. ಜನ ಇಲ್ಲದೆ ಹೋದಾಗ ಜೋರಾಗಿ ಚೀರಿ ಬೇರೆಯವರ ಗಮನ ಸೆಳೆಯಲು ಹೇಳಿದರು. ಎಷ್ಟು ಸರಳ ಅಲ್ಲವೇ.

ಇನ್ನು ಪಾಲಕರ ಜವಾಬ್ದಾರಿ ಮಕ್ಕಳಿಗಿಂತಲೂ ದೊಡ್ಡದು. ಮಗುವಿನ್ನೂ ಚಿಕ್ಕದು ಅದಕ್ಕೆ ಈ ಎಲ್ಲಾ ವಿಷಯಗಳು ಅರಿವಿಗೆ ಬರುವುದಿಲ್ಲ, ನಿಜ.

* ನಿಮ್ಮ ಮಗು ಆ ರೀತಿ ವರ್ತಿಸುವವರ ಉಪಸ್ಥಿತಿಯಲ್ಲಿ ಒಂದು ರೀತಿಯ ಅಸಹನೆಯನ್ನು ಪ್ರಕಟಿಸುತ್ತದೆ. ಅದನ್ನು ಗಮನಿಸಿ. ಏನೋ ತೊಂದರೆ ಆಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಲು ಆಗದೆ ಇರುವ ಮಕ್ಕಳ ಮನಸ್ಸಿಗೆ ಇಂತಹ ಘಟನೆಗಳು ಸವಾಲೊಡ್ಡಿ ಆತ್ಮವಿಶ್ವಾಸವನ್ನು ಕದಡುತ್ತವೆ.
* ಘಟನೆಯ ಪುನರಾವರ್ತಿತ ನೆನಪು ಅವರ ಮನಃಶಾಂತಿಯನ್ನು ಹಾಳುಮಾಡುತ್ತದೆ.
* ಒಂದು ರೀತಿಯ ಅಸುರಕ್ಷಿತಾ ಭಾವ ಅವರನ್ನು ಕಾಡುತ್ತದೆ.
* ಮಗು ಹೆಚ್ಚು ಅಂತರ್ಮುಖಿಯಾಗುತ್ತಾ ಹೋಗುತ್ತದೆ.
* ದೈಹಿಕ ತೊಂದರೆಗಳು ಹೆಚ್ಚಾಗಿ ಮಗು ಶಾಲೆಗೆ ಹೋಗಲು ಮನಸ್ಸು ಮಾಡುವುದಿಲ್ಲ. ದೈಹಿಕ ತೊಂದರೆಗಿಂತ ಮಾನಸಿಕವಾಗಿ ಮಗು ಇನ್ನಷ್ಟು ಕುಗ್ಗುತ್ತಾ ಹೋಗುತ್ತದೆ.
* ಕೊಂಚ ದೊಡ್ಡ ವಯಸ್ಸಿನ ಮಕ್ಕಳಾದರೆ ಪಾಲಕರ ಮುಂದೆ ಹೇಳಲಾರದೇ, ಮುಚ್ಚಿಡಲಾರದೆ ಮತ್ತಷ್ಟು ಒದ್ದಾಡುತ್ತಾರೆ.

ಕೆಲವೊಮ್ಮೆ ಸಂಬಂಧಗಳನ್ನು ಉಳಿಸಿಕೊಳ್ಳುವ ಸಲುವಾಗಿ ಪಾಲಕರು ತಮ್ಮ ಮಕ್ಕಳು ತಮ್ಮ ಮುಂದೆ ಬೇರೆಯವರ ಬಗ್ಗೆ ದೂರು ಹೇಳಲು ಬಂದಾಗ ಮಕ್ಕಳನ್ನು ಗದರಿಸಿಕೊಳ್ಳುತ್ತಾರೆ.... ಜೊತೆಗೆ ಯಾರಿಗೂ ಹೇಳಬೇಡ ಎಂದು ತಾಕೀತು ಮಾಡುತ್ತಾರೆ. ಇದು ಖಂಡಿತಾ ಸಲ್ಲದು.

ನಿಮ್ಮ ಮಕ್ಕಳ ಮಾನಸಿಕ ಸ್ಥಿತಿ ನಿಮ್ಮ ಸಂಬಂಧಕ್ಕಿಂತ ಹೆಚ್ಚಿನದು. ಮಕ್ಕಳ ಅಂತರ್ಮುಖತೆ ಹೆಚ್ಚಾಗಿ ಅವರ ಮಾನಸಿಕ ಸ್ಥಿತಿ ಹದಗೆಡಬಹುದು, ಖಿನ್ನತೆ ಹೆಚ್ಚಾಗಬಹುದು. ಮುಂದೆ ಅದೇ ಮನೋ ದೈಹಿಕ ಕಾಯಿಲೆಯಾಗಿ ಪರಿಣಮಿಸಬಹುದು. ಆದ್ದರಿಂದ ಪಾಲಕರು

– ಮಕ್ಕಳು ತಮ್ಮ ಆತ್ಮ ಸಂರಕ್ಷಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಪಾಠ ಕಲಿಸಬೇಕು.
– ಮಕ್ಕಳು ಸದಾ ಪ್ರಫುಲ್ಲಿತವಾಗಿರುವಂತಹ ವಾತಾವರಣವನ್ನು ಸೃಷ್ಟಿಸಬೇಕು.
– ತಮಗಾಗುವ ತೊಂದರೆಗಳನ್ನು ಯಾವುದೇ ಮುಜುಗರವಿಲ್ಲದೆ ನಿರಾತಂಕವಾಗಿ ಹೇಳಿಕೊಳ್ಳಬೇಕು. ಮತ್ತು ಮುಖ್ಯವಾಗಿ – ಪಾಲಕರು ಅವರನ್ನು ಯಾವುದೇ ರೀತಿ ಜಡ್ಜಮೆಂಟಲ್ ಆಗಿ ಪ್ರತಿಕ್ರಿಯಿಸಬಾರದು. ಕೆಲ ಸೂಕ್ಷ್ಮ ಸಂಗತಿಗಳನ್ನು ನಿಭಾಯಿಸಲು ನಾವು ಕೂಡ ಅಷ್ಟೇ ಸೂಕ್ಷ್ಮರಾಗಬೇಕು....

ಮಕ್ಕಳಿಗೆ ಸರಿಯಾದ ಸಮಯಕ್ಕೆ ಅವಶ್ಯಕ ವಿಷಯಗಳ ತಿಳುವಳಿಕೆ ನೀಡದೇ ಹೋದರೆ ಆಸಕ್ತಿ ಕೆಟ್ಟ ಕುತೂಹಲವಾಗಿ, ಆ ಕುತೂಹಲ ಇನ್ನಿಲ್ಲದ ತಪ್ಪಿಗೆ ಅಣಿ ಮಾಡಿಕೊಡುತ್ತದೆ.

ಮನೆಯೇ ಮೊದಲ ಪಾಠಶಾಲೆ ತಾಯಿ ತಾನೇ ಮೊದಲ ಗುರು.... ಬಹಳಷ್ಟು ಹೆಣ್ಣು ಮಕ್ಕಳಿಗೆ ತಾಯಿಯೇ ಋತುಸ್ರಾವ, ಋತುಚಕ್ರ, ವೈವಾಹಿಕ ಜೀವನಕ್ಕೆ ಕಾಲಿಟ್ಟ ನಂತರದ ಗಂಡು ಹೆಣ್ಣಿನ ನಡುವಿನ ಸಂಬಂಧಗಳ ಕುರಿತಾಗಿ ತಿಳಿ ಹೇಳುತ್ತಾಳೆ. ಆದರೆ ಈಗ ಕಾಲ ಬದಲಾಗಿದ್ದು ಹಾಲು ಹಲ್ಲು ಇರುವ ಮುನ್ನವೇ ಪ್ಯೂಬರ್ಟಿ ಹಂತಕ್ಕೆ ಬರುವ ಮಕ್ಕಳಿಗೆ ಎಲ್ಲ ವಿಷಯಗಳನ್ನು ಸೂಕ್ಷ್ಮವಾಗಿ ತಿಳಿಸಿ ಹೇಳುವ ಕೆಲಸ ತಾಯಂದಿರು ಇನ್ನು ಕೆಲ ವರ್ಷ ಮೊದಲೇ ಮಾಡಬೇಕು. ಹೆಣ್ಣು ಮಕ್ಕಳಿಗಾದರೂ ಕೊಂಚ ವಿಷಯಗಳು ಗೊತ್ತಿರುತ್ತವೆ.... ಆದರೆ ಗಂಡು ಹುಡುಗರಿಗೆ ಹೇಳಿಕೊಡಲು ಅಪ್ಪನಿಗೆ ಮುಜುಗರ. ತನ್ನಲ್ಲಾಗುವ ದೈಹಿಕ ಬದಲಾವಣೆಗಳ ಕುರಿತು ಯಾರಿಗೂ ಹೇಳಿಕೊಳ್ಳಲಾಗದ ಸಂಕೋಚ ಗಂಡು ಮಕ್ಕಳಿಗೆ. ತಮ್ಮ ಕುತೂಹಲವನ್ನು ತಣಿಸಿಕೊಳ್ಳಲು ಮಕ್ಕಳು ತಮ್ಮ ಅಂಗೈಯಲ್ಲಿರುವ ಮೊಬೈಲ್ ಮೂಲಕ ವಿವಿಧ ಸಾಮಾಜಿಕ ಜಾಲತಾಣಗಳ ಮೊರೆ ಹೋಗುತ್ತಾರೆ ಇಲ್ಲವೇ ಸ್ನೇಹಿತರೊಂದಿಗೆ ಗುಟ್ಟಾಗಿ ಚರ್ಚೆ ನಡೆಸುತ್ತಾರೆ.

ಸಾಮಾಜಿಕ ಜಾಲತಾಣಗಳು ಒಂದು ಕೇಳಿದರೆ ನೂರೊಂದು ಮಾಹಿತಿ ಕೊಡುವ, ಆರೋಗ್ಯಕರ ಮಾಹಿತಿಯ ಬದಲು ಅನಾರೋಗ್ಯಕರ ಚಟುವಟಿಕೆಗಳ ಕುರಿತ ಚಿತ್ರಣಗಳ ಮೂಲಕ ಮಕ್ಕಳ ಮನಸ್ಸನ್ನು ಮತ್ತಷ್ಟು ಕೆಡಿಸುತ್ತವೆ. ಸ್ವಸ್ಥ ಸಮಾಜದ ಆರೋಗ್ಯಕ್ಕೆ ಧಕ್ಕೆ ತರುವಂತಹ ಕೃತ್ಯಗಳಲ್ಲಿ ಮಕ್ಕಳು ತೊಡಗಿಕೊಳ್ಳುವಂತಹ ಮಾಹಿತಿಗಳುಜಾಲತಾಣಗಳಲ್ಲಿ ಹೇರಳವಾಗಿ ಲಭ್ಯವಾಗುತ್ತಿವೆ.

ಇನ್ನು ಸಮಯ ಮೀರಿಲ್ಲ ಎಂದುಕೊಳ್ಳುವುದಾದರೆ ಮಕ್ಕಳ ಶಾಲೆಯ ಪಠ್ಯದಲ್ಲಿ ಬರುವ ಸಂತಾನೋತ್ಪತ್ತಿ ಕ್ರಿಯೆಯ ಸೂಕ್ಷ್ಮ ಸಂಗತಿಗಳನ್ನು ತಿಳಿಸಬೇಕು. ಯಾವುದೇ ಮುಜುಗರ ಸಂಕೋಚಗಳಿಗೆ ಎಡೆ ಮಾಡಿಕೊಡದೆ ವೈಜ್ಞಾನಿಕವಾದ ಮಾಹಿತಿಯನ್ನು ನೀಡುವ ಮೂಲಕ ಮಕ್ಕಳಿಗೆ ಸರಿಯಾದ ದಾರಿ ತೋರಿಸಬೇಕು. ಆರೋಗ್ಯಕರ ವಿಷಯವನ್ನು ಅನಾರೋಗ್ಯಕರ ದಾರಿಯಲ್ಲಿ ಕಲಿಯುವುದನ್ನು ತಪ್ಪಿಸಬೇಕು.

# ರಾಜ್ಯ ಮಟ್ಟದ ಛಾಯಾ ಚಿತ್ರಸ್ಪರ್ಧೆ ವಿಜೇತರು

■ **ಹಂಪಿ ಟೈಮ್ಸ್ ಬೆಂಗಳೂರು**

ಸಾರ್ವತ್ರಿಕ ಲೋಕಸಭಾ ಚುನಾವಣೆ 2024 ರ ಅಂಗವಾಗಿ ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ವತಿಯಿಂದ ಮಾಧ್ಯಮ ಹಾಗೂ ಹವ್ಯಾಸಿ ಛಾಯಾಗ್ರಾಹಕರಿಗಾಗಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆಯ ವಿಜೇತರನ್ನು ಇಂದು ಘೋಷಿಸಲಾಗಿದೆ.

ಪ್ರಜಾವಾಣಿ/ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯ ಮಂಗಳೂರು ಛಾಯಾಗ್ರಾಹಕ ಹೆಚ್ ಫಕ್ರುದ್ದೀನ್ ಪ್ರಥಮ, ಬಾಗಲಕೋಟೆಯ ಹಳ್ಳಿ ಸಂದೇಶ ಪತ್ರಿಕೆಯ ಇಂದ್ರಕುಮಾರ್ ಬಿ ದಸ್ತೇನವರ ದ್ವಿತಿಯ, ಮೂಡಬಿದಿರೆಯ ಹವ್ಯಾಸಿ ಛಾಯಾಗ್ರಾಹಕ ಜಿನೇಶ್ ಪ್ರಸಾದ್ ತೃತೀಯ, ಸಮಾದಾನಕರ ಬಹುಮಾನಕ್ಕೆ ಇಬ್ಬರು ಆಯ್ಕೆಯಾಗಿದ್ದು ಉಡುಪಿಯ ಉದಯವಾಣಿ ಪತ್ರಿಕೆಯ ಆಸ್ಟ್ರೋ ಮೋಹನ್ ಹಾಗೂ ಬೆಂಗಳೂರಿನ ಸಂಜೆ ಸಮಯ ಪತ್ರಿಕೆಯ ಶ್ರೀಮತಿ ಪೂರ್ಣಿಮ ರವಿ ಮತ್ತು ವಿಶೇಷ ಬಹುಮಾನಕ್ಕೆ ಸಹ ಇಬ್ಬರು ಆಯ್ಕೆಯಾಗಿದ್ದು ಮೈಸೂರಿನ ವಿಜಯವಾಣಿ ಪತ್ರಿಕೆಯ ಕೆ.ಹೆಚ್ ಚಂದ್ರು ಹಾಗೂ ಕಲಬುರಗಿಯ ವಿಜಯ ಕರ್ನಾಟಕ ಪತ್ರಿಕೆಯ ಶಿವಶರಣಪ್ಪ ಬೆನ್ನೂರ್ ಅವರು ವಿಜೇತರಾಗಿದ್ದಾರೆ.

ರಾಜ್ಯಮಟ್ಟದ ಈ ಛಾಯಾಚಿತ್ರ ಸ್ಪರ್ಧೆಯ ಆಯ್ಕೆ ಸಮಿತಿಯಲ್ಲಿ ಅಧ್ಯಕ್ಷರಾಗಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯ ಮಾಧ್ಯಮ ವಿಭಾಗದ ವಿಶೇಷ ಅಧಿಕಾರಿ ಎ.ವಿ.ಸೂರ್ಯಸೇನ್, ಐ.ಎಫ್.ಎಸ್, ಸದಸ್ಯರಾಗಿ ರಾಜ್ಯಮಟ್ಟದ ಸ್ವೀಪ್ ಹಿರಿಯ ಸಮಾಲೋಚಕರಾದ ನಿವೃತ್ತ ಐ.ಎ.ಎಸ್ ಅಧಿಕಾರಿ ಪಿ.ಎಸ್.ವಸ್ತ್ರದ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಛಾಯಾಚಿತ್ರ ವಿಭಾಗದ ಅಧಿಕಾರಿ ಚಂದ್ರಶೇಖರ್, ನಿವೃತ್ತ ಹಾಗೂ ಹಿರಿಯ ಛಾಯಾಗ್ರಾಹಕರಾದ ವಿಶ್ವನಾಥ್ ಸುವರ್ಣ ಹಾಗೂ ಸದಸ್ಯ ಕಾರ್ಯದರ್ಶಿಯಾಗಿ ಹಿರಿಯ ಸಹಾಯಕ ನಿರ್ದೇಶಕರಾದ ಜಡಿಯಪ್ಪ ಗೆದ್ಲಗಟ್ಟಿಅವರನ್ನುಮುಖ್ಯಚುನಾವಣಾಧಿಕಾರಿಗಳ ಕಚೇರಿ ವತಿಯಿಂದ ನೇಮಿಸಲಾಗಿತ್ತು.

ಸಾರ್ವತ್ರಿಕ ಲೋಕಸಭಾ ಚುನಾವಣೆ 2024 ರ ಮತದಾನ ಕರ್ನಾಟಕ ರಾಜ್ಯದಲ್ಲಿ ಏಪ್ರಿಲ್ 26 ಮತ್ತು ಮೇ 7 ರಂದು ಎರಡು ಹಂತದಲ್ಲಿ ಜರುಗಿತ್ತು. ಜಗತ್ತಿನ ಅತಿದೊಡ್ಡ ಪ್ರಜಾಪಭುತ್ವ ದೇಶವಾಗಿರುವ ನಮ್ಮ ಭಾರತದಲ್ಲಿ ಚುನಾವಣೆಯನ್ನು 'ಪ್ರಜಾಪ್ರಭುತ್ವದ ಹಬ್ಬ'ದಂತೆ ಆಚರಿಸಲಾಗುತ್ತಿದೆ. ಕಳೆದ ಲೋಕಸಭಾ ಚುನಾವಣೆ 2019 ಹಾಗೂ ಸಾರ್ವತ್ರಿಕ ಕರ್ನಾಟಕ ವಿಧಾನಸಭೆ ಚುನಾವಣೆ–2023 ರ ಸಂದರ್ಭದಲ್ಲಿ ಸಹ ಮಾಧ್ಯಮಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಹವ್ಯಾಸಿ ಪತ್ರಿಕಾ ಛಾಯಾಗ್ರಹಕರಿಗಾಗಿ ಮತದಾನದ ವಿಷಯದ ಬಗ್ಗೆ ರಾಜ್ಯ ಮಟ್ಟದ ಛಾಯಾ ಚಿತ್ರಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕಳೆದ ಎರಡು ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಛಾಯಾ ಚಿತ್ರ ಸ್ಪರ್ಧೆಯ ಮೂಲಕ ಚುನಾವಣಾ ಸಂಬಂಧಿತ ಅತ್ಯುತ್ತಮ ಹಾಗೂ ಸಂಗ್ರಹಯೋಗ್ಯ ಛಾಯಾಚಿತ್ರಗಳನ್ನು ಭಾರತ ಚುನಾವಣಾ ಆಯೋಗ ಪ್ರಶಂಸಿವುದರ ಜೊತೆಗೆ, ತನ್ನ ವರದಿ ಹಾಗೂ ಪುಸ್ತಕಗಳ ಮುಖಪುಟಗಳಲ್ಲಿ ನಮ್ಮ ರಾಜ್ಯದ ಈ ಛಾಯಾಚಿತ್ರಗಳನ್ನು ಬಳಸಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಾರ್ವತ್ರಿಕ ಲೋಕಸಭಾ ಚುನಾವಣೆ 2024 ರ ನಿಮಿತ್ತ ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅತ್ಯುತ್ತಮ ಛಾಯಾಚಿತ್ರ ತೆಗೆದ ಛಾಯಾಗ್ರಾಹಕರಿಗೆ ಪ್ರಮಾಣ ಪತ್ರ ಹಾಗೂ ನಗದು ಬಹುಮಾನವನ್ನು ನೀಡಲಾಗುತ್ತದೆ.

ರಾಜ್ಯಮಟ್ಟದ ಈ ಸ್ಪರ್ಧೆಯಲ್ಲಿ ಮಾಧ್ಯಮಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಹವ್ಯಾಸಿ ಪತ್ರಿಕಾ ಛಾಯಾಗ್ರಹಕರು ಸೇರಿ ಒಟ್ಟು 219 ಜನರು ಭಾಗವಹಿಸಿದ್ದರು. ಛಾಯಾಗ್ರಹಕರು ತಾವು ತೆಗೆದ ಗರಿಷ್ಠ 5 ಅತ್ಯುತ್ತಮ ಛಾಯಾಚಿತ್ರಗಳನ್ನು ಕಳುಹಿಸಿದ್ದರು. ಪ್ರಶಸ್ತಿಗೆ ಆಯ್ಕೆಯಾದ ಎಲ್ಲರಿಗೂ ಮುಖ್ಯ ಚುನಾವಣಾಧಿಕಾರಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಸಂಘಟಿತ ಹೋರಾಟಕ್ಕೆ ಫಲ ನಿಶ್ಚಿತ

ಮೊದಲ ಪುಟದಿಂದ

ಐಆರ್‌ಡಿಎ ಮುಖಾಂತರ ನಾನಾ ಕಾನೂನುಗಳನ್ನು ಪ್ರತಿನಿಧಿಗಳ ಮೇಲೆ ಹೇರುತ್ತಿದೆ ಇದರ ಪರಿಣಾಮ ನೇರವಾಗಿ ಪ್ರತಿನಿಧಿಗಳ ಮೇಲೆ ಆಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ 27 ಸದಸ್ಯರನ್ನು ಒಳಗೊಂಡ ನೂತನ ಕಾರ್ಯಕಾರಿ ಸಮಿತಿ ವಾರ್ಷಿಕ ಮಹಾಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆಯಾಯಿತು.

**ಪದಾಧಿಕಾರಿಗಳ ಆಯ್ಕೆ:** ನೂತನ ಅಧ್ಯಕ್ಷರಾಗಿ ಸೈಯದ್ ಬಶೀರ್ ಅಹಮದ್, ಉಪಾಧ್ಯಕ್ಷರಾಗಿ ಕೆ ಪಂಪಾಪತಿ ಹೆಚ್ ಕೊಟ್ರೇಶಪ್ಪ, ಸರಸ್ವತಿ, ಕೆ ನೌಶಾದ್ ಅಲಿ ಆಯ್ಕೆಯಾದರು, ಖಜಾಂಚಿಯಾಗಿ ಖಾಸಿಂಸಾಬ್, ಸಹ ಕಾರ್ಯದರ್ಶಿಗಳಾಗಿ ತಿಮ್ಮರಾಜು, ಕೆ ಮಲ್ಲಿಕಾರ್ಜುನ ಚೆನ್ನಪ್ಪ, ಶಿಲ್ಪಾ ರಾಣಿ, ಮತ್ತು ಖಜಾಂಚಿಯಾಗಿ ಟಿ ಪಾಂಡುರಂಗ ರಾವ್ ಇವರನ್ನು ಆಯ್ಕೆ ಮಾಡಲಾಯಿತು.

ಭಾಸ್ಕರ್ ಬಳಗಾನೂರ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಎ ಎಸ್ ಲೋಕೇಶ್ ಶೆಟ್ಟಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಡಿಸಿ ಶಿವಮೂರ್ತಿ, ಎಸ್ ವಲಿ ಮೋಹಿದೀನ್, ಜಿಎನ್ ತಿಪ್ಪೇಸ್ವಾಮಿ, ಎಂ ಎಸ್ ಭಟ್, ಡಿ ಶ್ರೀನಿವಾಸ್ ಮತ್ತು ಸಿಐಟಿಯು ವತಿಯಿಂದ ಆರ್ ಭಾಸ್ಕರ್ ರೆಡ್ಡಿ, ಜೆ ಪ್ರಕಾಶ್ ಹಾಜರಿದ್ದರು. ಕೆ ನೌಶಾದ್ ಅಲಿಕಾರ್ಯಕ್ರಮವನ್ನು ನಿರೂಪಿಸಿದರು.

ಸಮಾರಂಭದಲ್ಲಿ ಶತಕ ವೀರ ಪ್ರತಿನಿಧಿಗಳು ಎಂ ಡಿ ಆರ್ ಟಿ ಪ್ರತಿನಿಧಿಗಳು ಮತ್ತು 25 ವರ್ಷ ಪೂರೈಸಿದ ಎಲ್ಲಾ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು. ಎ ಭಾಸ್ಕರ್ ರಾವ್. ರಾಜ ಪಿ ಮಂಜುನಾಥ್ ರಮೇಶ್ ಶೆಟ್ಟಿ,ಭಾರತಿ ದಿನಕರ ಶಾರದ,ಶಶಿಕಲಾ, ಜಮೀರ ಬೇಗಂ,ದೇವರಾಜ್, ಮುಂತಾದ ಪ್ರತಿನಿಧಿಗಳು ಭಾಗವಹಿಸಿದ್ದರು.

## ಮೇ 31 ರಂದು ಅಪ್ರೆಂಟಿಸ್ ತರಬೇತಿಗಾಗಿ ಕ್ಯಾಂಪಸ್ ಸಂದರ್ಶನ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ರೇಡಿಯೋ ಪಾರ್ಕ್ ಪ್ರದೇಶದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಮೇ 31 ರಂದು ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನ ಟೊಯೋಟ ಕಿರ್ಲೋಸ್ಕರ ಕಂಪನಿಯಲ್ಲಿ ಅಪ್ರೆಂಟೀಸ್ ತರಬೇತಿಗಾಗಿ ಕ್ಯಾಂಪಸ್ ಸಂದರ್ಶನ ಏರ್ಪಡಿಸಲಾಗಿದೆ ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೆ.ಹೆಚ್.ಎಂ.ಪಂಡಿತಾರಾಧ್ಯ ಅವರು ತಿಳಿಸಿದ್ದಾರೆ.

ಸಂದರ್ಶನದಲ್ಲಿ ಫಿಟ್ಟರ್, ಟರ್ನರ್, ಎಲೆಕ್ಟ್ರಿಷಿಯನ್, ವೆಲ್ಡರ್, ಇ.ಎಂ, ಎಂ.ಎಂ.ವಿ, ಮೆಕ್ಯಾನಿಕ್ ಡೀಸಲ್ ವೃತ್ತಿಗಳ ಐ.ಟಿ.ಐ ಪಾಸಾದ ಅಭ್ಯರ್ಥಿಗಳು ಹಾಗೂ ಅಂತಿಮ ವರ್ಷದ ತರಬೇತಿದಾರರು ಭಾಗವಹಿಸಬಹುದು.

*ದಾಖಲೆಗಳು:*

ಸಂದರ್ಶನದಲ್ಲಿ ಭಾಗವಹಿಸುವವರು ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಐಟಿಐ ಅಂಕಪಟ್ಟಿ, ಎರಡು ಭಾವಚಿತ್ರಗಳು, ಆಧಾರ್ ಕಾರ್ಡ್‌ನ ಪ್ರತಿ ಹಾಗೂ ಸ್ವ–ವಿವರವುಳ್ಳ ಬಯೋಡೇಟಾ ಮತ್ತು ತಪ್ಪದೇ ಸ್ಮಾರ್ಟ್ ಮೊಬೈಲ್‌ನ್ನು ತರಬೇಕು. 18 ವರ್ಷ ಮೇಲ್ಪಟ್ಟವರು ಅರ್ಹರಾಗಿರುತ್ತಾರೆ.

ಮೇ 31 ರಂದು ಲಿಖಿತ ಪರೀಕ್ಷೆ ಹಾಗೂ ಸಂದರ್ಶನ ನಡೆಯಲಿದ್ದು, ಜೂನ್ 01 ರಂದು ವೈದ್ಯಕೀಯ ಪರೀಕ್ಷೆ ನಡೆಯಲಿದೆ.

ಅರ್ಹರು ಕ್ಯಾಂಪಸ್ ಸಂದರ್ಶನಕ್ಕೆ ಹಾಜರಾಗಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಳೆಗಾಲದ ಜೆಸ್ಕಾಂ ವಿದ್ಯುತ್ ಸಮಸ್ಯೆಗೆ ಸಂಪರ್ಕಿಸಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಗ್ರಾಮೀಣ ಜೆಸ್ಕಾಂ ವಿಭಾಗದ ವ್ಯಾಪ್ತಿಯಲ್ಲಿ ಮಳೆಗಾಲ ಸಮಯದಲ್ಲಿ ವಿದ್ಯುತ್ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಹೆಚ್ಚಿದ್ದು, ಯಾವುದೇ ವಾಹಕಗಳು ತುಂಡಾಗಿ ಬಿದ್ದಲ್ಲಿ ಮತ್ತು ಕಂಬಗಳು ನೆಲಕ್ಕೆ ಉರುಳಿದ್ದಲ್ಲಿ ವಿದ್ಯುತ್ ಪರಿವರ್ತಕದ ಮೇಲೆ ಬೆಂಕಿ ಕಾಣಿಸಿಕೊಂಡರೆ, ವಿದ್ಯುತ್ ಗ್ರಾಹಕರು ಮುಂಜಾಗ್ರತರಾಗಿ ಯಾವುದೇ ವಿದ್ಯುತ್ ಸಂಪರ್ಕಕ್ಕೆ ಹೋಗದೇ ಈ ಕೆಳಕಂಡ ಜೆಸ್ಕಾಂ ಅಧಿಕಾರಿಗಳಿಗೆ ಸಂಪರ್ಕಿಸಬೇಕು ಎಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ರಂಗನಾಥಬಾಬು ಅವರು ತಿಳಿಸಿದ್ದಾರೆ.

**ಬಳ್ಳಾರಿ ಗ್ರಾಮೀಣ ಉಪ ವಿಭಾಗ (ಬಳ್ಳಾರಿ ಗ್ರಾಮೀಣ ಮತ್ತು ಕುರುಗೋಡು ತಾಲ್ಲೂಕಿಗೆ ಸಂಬಂಧಪಟ್ಟ)**

ಬಳ್ಳಾರಿ ಗ್ರಾಮೀಣ ಜೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮೊ.9448482161, ಘಟಕ–01 (ಕೋಳೂರು, ಕೊರ್ಲಗುಂದಿ, ಹರಗಿನಡೋಣಿ ಭಾಗದ ಗ್ರಾಮಗಳ) ಶಾಖಾಧಿಕಾರಿ ಮೊ.9449597337, ಘಟಕ–02 (ಎಸ್‌ಜೆ ಕೋಟೆ, ಶಂಕರಬಂಡೆ, ಮಿಂಚೇರಿ ಭಾಗದ ಗ್ರಾಮಗಳ) ಶಾಖಾಧಿಕಾರಿ ಮೊ.9449597338, ಘಟಕ–03 (ಗುಗ್ಗರಹಟ್ಟಿ, ಹಲಕುಂದಿ, ಅಂದ್ರಾಳ್ ಭಾಗದ ಗ್ರಾಮಗಳ) ಶಾಖಾಧಿಕಾರಿ ಮೊ.9449597351, ಕುಡತಿನಿ ಶಾಖಾಧಿಕಾರಿ ಮೊ.9449597345, ಮೋಕಾ ಶಾಖಾಧಿಕಾರಿ ಮೊ.9449597346, ಪಿ.ಡಿ ಹಳ್ಳಿ ಶಾಖಾಧಿಕಾರಿ ಮೊ.9449597352, ಕುರುಗೋಡು ಶಾಖಾಧಿಕಾರಿ ಮೊ.9449597347, ಎಮ್ಮಿಗನೂರು ಶಾಖಾಧಿಕಾರಿ ಮೊ.9449597353.

**ಸಂಡೂರು ಉಪ ವಿಭಾಗ (ಸಂಡೂರು ತಾಲ್ಲೂಕಿಗೆ ಸಂಬಂಧಪಟ್ಟ)**

ಸಂಡೂರು ಜೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮೊ.9448482159, ಸಂಡೂರು ಶಾಖಾಧಿಕಾರಿ ಮೊ.9449597343, ತೋರಣಗಲ್ಲು ಶಾಖಾಧಿಕಾರಿ ಮೊ.9449597344, ಚೋರನೂರು ಶಾಖಾಧಿಕಾರಿ ಮೊ.9449597350, ವಿಠ್ಠಲಾಪುರ ಶಾಖಾಧಿಕಾರಿ ಮೊ.9480846642, ಬಂಡ್ರಿ ಶಾಖಾಧಿಕಾರಿ ಮೊ.9449597350.

**ಸಿರುಗುಪ್ಪ ಉಪ ವಿಭಾಗ (ಸಿರುಗುಪ್ಪ ತಾಲ್ಲೂಕಿಗೆ ಸಂಬಂಧಪಟ್ಟ):**

ಸಿರುಗುಪ್ಪ ಜೆಸ್ಕಾಂ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮೊ.9036502714, ಸಿರುಗುಪ್ಪ ನಗರ ಶಾಖಾಧಿಕಾರಿ ಮೊ.9986382872, ಹಚ್ಚೋಳ್ಳಿ ಶಾಖಾಧಿಕಾರಿ ಮೊ.9900169001, ಸಿರುಗುಪ್ಪ ಗ್ರಾಮೀಣ ಶಾಖಾಧಿಕಾರಿ ಮೊ.9448632907, ತೆಕ್ಕಲಕೋಟೆ ಶಾಖಾಧಿಕಾರಿ ಮೊ.8861297323, ಸಿರಿಗೇರಿ ಶಾಖಾಧಿಕಾರಿ ಮೊ.9743484634.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ ಗ್ರಾಮೀಣ ಜೆಸ್ಕಾಂ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಮೊ.9448359022 ಹಾಗೂ ಯಾವುದೇ ವಿದ್ಯುತ್ ಕುರಿತ ಸಮಸ್ಯೆ ಅಥವಾ ದೂರುಗಳಿದ್ದಲ್ಲಿ ಸಹಾಯವಾಣಿ ಸಂಖ್ಯೆ 1912 ನಂಬರಿಗೆ ಕರೆ ಮಾಡಿ ತಮ್ಮ ದೂರುಗಳನ್ನು ನೊಂದಾಯಿಸಿಕೊಳ್ಳಬಹುದು ಎಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ರಂಗನಾಥಬಾಬು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.


## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**28–05–2024 – ಮಂಗಳವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಾಷಡ |
| ಯೋಗ | : ಬ್ರಹ್ಮ |
| ಕರಣ | : ತೈತುಲ |
| ಸೂರ್ಯೋದಯ | : 05:42:46 |
| ಸೂರ್ಯಾಸ್ತ | : 19:05:59 |
| ರಾಹು | : 03:00–04:30 |
| ಯಮಘಂಡ | : 09:00–10:30 |
| ಗುಳಿಕ | : 12:00–01:30 |

## ತುಂಗಭದ್ರಾ ನೀರಿನ ಮಟ್ಟ

**ಸೋಮವಾರ : 27–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.43 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.349 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.64 ಅಡಿ |
| ಒಳ ಹರಿವು | 1020ಕ್ಯುಸೆಕ್ |
| ಹೊರ ಹರಿವು | 242 ಕ್ಯುಸೆಕ್ |
| ಸಾಮರ್ಥ್ಯ | 4.297 ಟಿಎಂಸಿ |

# ಪಿಡಿಐಟಿ ವಾರ್ಷಿಕೋತ್ಸವ ಸಿಂಚನ 24

### ಪಿಡಿಐಟಿ ಅಧ್ಯಕ್ಷ ಕರಿಬಸವರಾಜ ಬಾದಾಮಿ ಹೇಳಿಕೆ । ರ್‍ಯಾಂಕ್, ಕ್ರೀಡಾ ಸಾಧಕರಿಗೆ ಸನ್ಮಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಹೊಸಪೇಟೆಯ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದ 24ನೇ ವಾರ್ಷಿಕೋತ್ಸವದ ಸಿಂಚನ ಸಮಾರಂಭ ಮೇ.31 ಮತ್ತು ಜೂ.1 ರಂದು ಜರುಗಲಿದೆ ಎಂದು ಪಿಡಿಐಟಿ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಕರಿಬಸವರಾಜ ಬಾದಾಮಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಕಲ್ಯಾಣ ಕರ್ನಾಟಕ ಭಾಗದ ಗ್ರಾಮೀಣ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಜನ್ಮತಾಳಿದ ವೀರಶೈವ ವಿದ್ಯಾವರ್ಧಕ ಸಂಘಕ್ಕೆ 109 ವರ್ಷಗಳಾಗಿದ್ದು, 50ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳ ಜನಕವಾಗಿದೆ. ಗ್ರಾಮೀಣ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗ ಬಾರದೆಂದು 1997 ರಲ್ಲಿ ಹೊಸಪೇಟೆಯಲ್ಲಿ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯ ಸ್ಥಾಪಿಸಿತು. ಕಳೆದ 24 ವರ್ಷಗಳಲ್ಲಿ ಈ ಕಾಲೇಜಿನಲ್ಲಿ ಶಿಕ್ಷಣ ಪಡೆದ ಅನೇಕ ಪ್ರತಿಭಾವಂತ ಮಕ್ಕಳ ಪೈಕಿ 5000ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಹೆಸರಾಂತ ಕಂಪನಿಗಳಲ್ಲಿ ಉದ್ಯೋಗ ಲಭಿಸಿದೆ ಅಲ್ಲದೆ ರೈತಾಪಿ ಬಡ ಮತ್ತು ಮಧ್ಯಮವರ್ಗದ ಕುಟುಂಬದ ಅನೇಕ ಮಕ್ಕಳಿಗೆ ಉದ್ಯೋಗಾಧಾರಿತ ಶಿಕ್ಷಣ ನೀಡುವ ಮೂಲಕ ಅವರ ಬದುಕಿದೆ ಬೆಳಕಾಗಿದೆ. ಭವಿಷ್ಯದಲ್ಲಿ ಕಾನೂನು ಪದವಿ ಕಾಲೇಜ್, ಎಂ.ಸಿ.ಎ ಸೇರಿದಂತೆ ಬೇಡಿಕೆ ಇರುವ ವಿವಿಧ ಕೋರ್ಸ್‌ಗಳನ್ನು ಆರಂಭಿಸುವ ಚಿಂತನೆ ಸಂಘಕ್ಕಿದೆ ಎಂದರು.



ಸಿಂಚನ–24, ಪದವಿ, ಕ್ರೀಡಾ ದಿನಾಚರಣೆ ಹಾಗೂ ವಾರ್ಷಿಕೋತ್ಸವ ಸಮಾರಂಭ ಎರಡು ದಿನಗಳ ಕಾಲ ನಡೆಯಲಿದೆ. ಮೆ.31 ರಂದು ಬೆಳಿಗ್ಗೆ 10.30ಕ್ಕೆ ಪದವಿ ದಿನಾಚರಣೆ ನಡೆಯಲಿದ್ದು, ಕಲಬುರ್ಗಿ ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಅನಿಲ್ ಕುಮಾರ್ ಬಿಡ್ವೆ ಮತ್ತು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಜೆ. ತಿಪ್ಪೇರುದ್ರಪ್ಪ ಮುಖ್ಯ ಹಾಗೂ ಗೌರವಾನ್ವಿತ ಅತಿಥಿಗಳಾಗಿ ಉಪಸ್ಥಿತರಿರಲಿದ್ದಾರೆ. ಸಂಜೆ 5ಕ್ಕೆ ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ಮತ್ತು ಬಲ್ಡೋಟ ಗ್ರೂಫ್‌ನ ಸಿಎ, ಕಂಪನಿ ಕಾರ್ಯದರ್ಶಿ ಅನಿಲ್ ಕವಾಡಿಯ ಉಪಸ್ಥಿತರಿರಲಿದ್ದಾರೆ.

ಜೂ.1 ಸಂಜೆ 5ಕ್ಕೆ ವಾರ್ಷಿಕೋತ್ಸವ ಸಮಾರಂಭ ಜರುಗಲಿದ್ದು, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಮಿಲ್ಸ್ ಜೆಎಸ್‌ಡಬ್ಲ್ಯೂ ಕಾರ್ಯಕಾರಿ ಉಪಾಧ್ಯಕ್ಷ ಎಸ್.ಸಿ.ವಿಶ್ವನಾಥ, ಸಮುತ್ಕರ್ಷ ಮಹಾನಿರ್ದೇಶಕ ಜಿತೇಂದ್ರ ಪಿ.ನಾಯಕ್ ಉಪಸ್ಥಿತರಿರಲಿದ್ದಾರೆ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಬಳ್ಳಾರಿ ವೀ.ವಿ.ಸಂಘದ ಅಧ್ಯಕ್ಷ ಅಲ್ಲಂ ಗುರುಬಸವರಾಜ ಅಧ್ಯಕ್ಷತೆವಹಿಸುವರು. ಉಪಾಧ್ಯಕ್ಷ ಜಾನೇಕುಂಟೆ ಬಸವರಾಜ, ಕಾರ್ಯದರ್ಶಿ ಡಾ.ಅರವಿಂದ್ ಪಟೇಲ್, ಸಹಕಾರ್ಯದರ್ಶಿ ಯಾಳ್ಪಿ ಮೇಟಿ ಪಂಪನಗೌಡ, ಕೋಶಾಧಿಕಾರಿ ಬೈಲುವದ್ದಿಗೇರಿ ಯರ್‍ರಿಸ್ವಾಮಿ ಉಪಸ್ಥಿತರಿರಲಿದ್ದಾರೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ರೋಹಿತ್ ಯು.ಎಂ. ಮಾತನಾಡಿ, ಪಿಡಿಐಟಿ ಕಾಲೇಜಿನಲ್ಲಿ ಕೃತಕ ಬುದ್ದಿಮತ್ತೆ ಹಾಗೂ ಯಂತ್ರ ಕಲಿಕೆ (ಎಐಎಂಎಲ್) ನಂತಹ ವಿಶಿಷ್ಟ ವಿಭಾಗಗಳನ್ನು ಹೊಂದಿದ್ದು, ಎಂಬಿಎ ಪದವಿಯನ್ನು ಆಸಕ್ತ ವಿದ್ಯಾರ್ಥಿಗಳಿಗೆ ಕೊಡಮಾಡುತ್ತಿದೆ. 6 ಬಿಇ ಪದವಿ ವಿಭಾಗಗಳು, 2 ಎಂ.ಟೆಕ್ ಸ್ನಾತಕೋತ್ತರ, 2 ಸಂಶೋಧನಾ ಘಟಕಗಳು ಜೊತೆಗೆ ಎಂಬಿಎ ಸ್ನಾತಕೋತ್ತರ ತರಗತಿಗಳು ನಡೆಯುತ್ತಿದ್ದು ಸ್ಥಳೀಯ ಸೇರಿದಂತೆ ರಾಜ್ಯ, ಹೊರರಾಜ್ಯದ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಎಲ್ಲಾ ವಿಭಾಗಗಳ ಸೇರಿ ಒಟ್ಟು 1300 ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಈಸಂದರ್ಭದಲ್ಲಿ ಸನ್ಮಾನಿಸಲಾಗುತ್ತದೆ ಎಂದರು.

ಉಪಪ್ರಾಂಶುಪಾಲರು, ಕಾರ್ಯಕ್ರಮದ ಸಂಯೋಜಕರಾದ ಪ್ರೊ.ಪಾರ್ವತಿ ಕಡ್ಲಿ ಉಪಸ್ಥಿತರಿದ್ದರು.

# ವಿಜ್ಞಾನ

## ಕ್ಯಾಮೆರಾ ಫ್ಲ್ಯಾಶ್ ಏಕೆ ಕಣ್ಣುಗಳನ್ನು ಕೆಂಪು ಬಣ್ಣಕ್ಕೆ ತಿರುಗಿಸುತ್ತದೆ?

■ **ಆರ್.ಬಿ.ಗುರುಬಸವರಾಜ**

ರಾತ್ರಿ ರಿಸಿಪ್ಶನ್‌ಗೆ ಹೋಗಿದ್ದ ಕನಸು ಮಾಮನ ಕ್ಯಾಮೆರಾದಲ್ಲಿ ವಿವಿಧ ಭಂಗಿಗಳಲ್ಲಿ ಫೋಟೋ ತೆಗೆಸಿಕೊಂಡಿದ್ದಳು. ಬೆಳಿಗ್ಗೆ ಎದ್ದು ಕಂಪ್ಯೂಟರ್‌ನಲ್ಲಿ ಫೋಟೋಗಳನ್ನು ನೋಡಿದಳು. ಬಹುತೇಕ ಫೋಟೋದಲ್ಲಿನ ಕಣ್ಣುಗಳು ಕೆಂಪಗೆ ಹೊಳೆಯುತ್ತಿದ್ದವು. "ಮಾಮ, ನನ್ನ ಕಣ್ಣುಗಳನ್ನು ಹೀಗೇಕೆ ಕೆಂಪಗೆ ಹೊಳೆಯುವಂತೆ ಮಾಡಿರುವೆ?" ಎಂದಳು. ಅದು ನಾನು ಮಾಡಿದ್ದಲ್ಲ. ರಾತ್ರಿ ಫ್ಲ್ಯಾಶ್ ಆನ್ ಮಾಡಿ ಫೋಟೋ ತೆಗೆದಿದ್ದಕ್ಕೆ ಹೀಗಾಗಿದೆ ಎಂದ. "ಫ್ಲ್ಯಾಶ್ ಏಕೆ ಕಣ್ಣುಗಳನ್ನು ಕೆಂಪು ಬಣ್ಣಕ್ಕೆ ತಿರುಗಿಸುತ್ತದೆ?" ಎಂದಳು. ಅದಕ್ಕೆ ಮಾಮ ಹೀಗೆ ಹೇಳಿದ.



ಕ್ಯಾಮೆರಾ ಮುಂದೆ ನಿಂತಾಗ ಪ್ರತಿಯೊಬ್ಬರೂ ಕಣ್ಣರಳಿಸಿ ಫೋಸು ಕೊಡುವುದು ಸಹಜ. ಈ ಕಣ್ಣರಳಿಸುವಿಕೆ ಒಮ್ಮೊಮ್ಮೆ ಮುಜುಗರವನ್ನುಂಟು ಮಾಡುತ್ತದೆ. ಕ್ಯಾಮೆರಾ ಫ್ಲ್ಯಾಶ್ ಕಣ್ಣುಗಳ ಮೇಲೆ ಬಿದ್ದು ಕಣ್ಣುಗಳಲ್ಲಿ ಕೆಂಪು ಚುಕ್ಕೆಯನ್ನು ಮೂಡಿಸುತ್ತದೆ. ಇದರಿಂದ ಕಣ್ಣುಗಳು ಅಸಹ್ಯವಾಗಿ ಕಾಣುತ್ತವೆ ಮತ್ತು ಮುಜುಗರವನ್ನುಂಟು ಮಾಡುತ್ತವೆ.

ಫೋಟೋ ತೆಗೆಯುವ ವೇಳೆ ಕ್ಯಾಮೆರಾದ ಫ್ಲ್ಯಾ? ಕಣ್ಣಿನ ಹಿಂಭಾಗದಲ್ಲಿರುವ ರೆಟಿನಾವನ್ನು ಬೆಳಗಿಸುತ್ತದೆ. ರೆಟಿನಾವು ಸಮೃದ್ಧವಾದ ರಕ್ತನಾಳಗಳನ್ನು ಹೊಂದಿರುತ್ತದೆ. ರಕ್ತನಾಳಗಳು ಪ್ರಖರ ಬೆಳಕನ್ನು ಕ್ಯಾಮೆರಾದ ಕಡೆಗೆ ಪ್ರತಿಬಿಂಬಿಸುತ್ತವೆ. ಪರಿಣಾಮವಾಗಿ ಫೋಟೋದಲ್ಲಿ ಕಣ್ಣುಗಳು ಕೆಂಪು ಬಣ್ಣದಲ್ಲಿ ಕಾಣುವಂತೆ ಮಾಡುತ್ತದೆ.

ಫೋಟೋಗೆ ಫೋಸ್ ನೀಡಿದಾಗ ಕಣ್ಣುಗಳು ವಾತಾವರಣದಲ್ಲಿನ ಸಾಮಾನ್ಯ ಬೆಳಕಿಗೆ ಒಗ್ಗಿಕೊಂಡಿರುತ್ತವೆ. ಕ್ಯಾಮರಾ ಫ್ಲ್ಯಾ? ಅನ್ನು ಬಳಸಿದಾಗ, ಹೆಚ್ಚಿನ ಬೆಳಕನ್ನು ಅನುಮತಿಸಲು ಕಣ್ಣಿನ ಪಾಪೆಯು ಸಾಮಾನ್ಯಕ್ಕಿಂತ ಅಗಲವಾಗಿ ತೆರೆಯುತ್ತವೆ. ಏಕೆಂದರೆ ಫ್ಲ್ಯಾ? ತುಂಬಾ ಪ್ರಕಾಶಮಾನವಾಗಿರುತ್ತದೆ ಮತ್ತು ಹಠಾತ್ ಬೆಳಕಿನ ಬದಲಾವಣೆಗೆ ಹೊಂದಿಕೆಯಾಗುವುದು ಕಣ್ಣಿನ ನೈಸರ್ಗಿಕ ಪ್ರತಿಕ್ರಿಯೆಯಾಗಿದೆ. ಫ್ಲ್ಯಾ? ಆಫ್ ಆಗುವಾಗ, ಬೆಳಕು ಕಣ್ಣಿನ ಹಿಂಭಾಗದಲ್ಲಿರುವ ರೆಟಿನಾವನ್ನು ಪ್ರತಿಫಲಿಸುತ್ತದೆ. ಇದು ಛಾಯಾಚಿತ್ರದಲ್ಲಿ ಕಣ್ಣುಗಳಿಗೆ ಕೆಂಪು ಬಣ್ಣವನ್ನು ನೀಡುತ್ತದೆ.

ಹೆಚ್ಚಿನ ಕಾಂಪ್ಯಾಕ್ಟ್ ಕ್ಯಾಮೆರಾಗಳು ಮತ್ತು ಸ್ಮಾರ್ಟ್‌ಫೋನ್‌ಗಳಲ್ಲಿ, ಫ್ಲ್ಯಾ? ಕ್ಯಾಮೆರಾ ಲೆನ್ಸ್‌ಗೆ ಹತ್ತಿರದಲ್ಲಿದೆ. ವೃತ್ತಿಪರ ಛಾಯಾಗ್ರಹಣದಲ್ಲಿ, ಪ್ರತ್ಯೇಕ ಫ್ಲ್ಯಾ? ಘಟಕಗಳನ್ನು ಬಳಸುವುದರ ಮೂಲಕ ಮತ್ತು ಮೇಲ್ಛಾವಣಿಯಿಂದ ಫ್ಲ್ಯಾ? ಅನ್ನು ಬೌನ್ಸ್ ಮಾಡುವ ಮೂಲಕ ಅಥವಾ ಬೆಳಕನ್ನು ಮೃದುಗೊಳಿಸಲು ಪ್ರತಿಫಲಕಗಳನ್ನು ಬಳಸುವ ಮೂಲಕ ಕಣ್ಣಿಗೆ ನೇರವಾಗಿ ಫ್ಲ್ಯಾಶ್ ಬೀಳುವುದನ್ನು ತಪ್ಪಿಸಲಾಗುತ್ತದೆ. ಫ್ಲ್ಯಾಶ್‌ನಿಂದ ಕಣ್ಣು ಕೆಂಪಾಗುವುದನ್ನು ತಪ್ಪಿಸುವ ಇನ್ನೊಂದು ವಿಧಾನವೆಂದರೆ ಚೆನ್ನಾಗಿ ಬೆಳಕು ಬೀಳುವ ಅಥವಾ ನೈಸರ್ಗಿಕ ಬೆಳಕಿನ ಪ್ರದೇಶಗಳಲ್ಲಿ ಛಾಯಾಚಿತ್ರಗಳನ್ನು ತೆಗೆಯುವುದು.

# ಈಶಾನ್ಯ ಪದವೀಧರರ ಕ್ಷೇತ್ರ ಚುನಾವಣೆ ಹಿನ್ನಲೆ; ಮದ್ಯ ಮಾರಾಟ ನಿಷೇಧ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿಗೆ ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರ, ದ್ವೈವಾರ್ಷಿಕ ಚುನಾವಣೆಯ ಹಿನ್ನಲೆಯಲ್ಲಿ ಜೂನ್ 3 ರಂದು ಮತದಾನ ನಡೆಯಲಿದ್ದು, ಈ ಸಂದರ್ಭದಲ್ಲಿ ಸಾರ್ವಜನಿಕ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಪ್ರಜಾಪ್ರತಿನಿಧಿ ಕಾಯ್ದೆ, 1951ರ ಕಲಂ 135–ಸಿ ಹಾಗೂ ಕರ್ನಾಟಕ ಅಬಕಾರಿ(ಸನ್ನದುಗಳ ಸಾಮಾನ್ಯ ಷರುತ್ತುಗಳು) ನಿಯಮಗಳು, 1967ರ ನಿಯಮ 10–ಬಿ ರಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಜಿಲ್ಲಾದ್ಯಂತ ಎಲ್ಲಾ ರೀತಿಯ ಮದ್ಯ ಮಾರಾಟವನ್ನು ನಿಷೇಧಿಸಿ ಒಣ ದಿನ (ಆಡಿಥಿ ಜಚಿಥಿ) ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಜೂನ್ 1ರ ಸಂಜೆ 04 ಗಂಟೆಯಿಂದ ಜೂನ್ 3 ರ ಮಧ್ಯರಾತ್ರಿ 12.00 ಗಂಟೆಯವರೆಗೆ ಎಲ್ಲಾ ವಿವಿಧ ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚುವಂತೆಯೂ ಹಾಗೂ ಎಲ್ಲಾ ರೀತಿಯ ಮದ್ಯ ತಯಾರಿಕಾ ಹಾಗೂ ವಿತರಣ ಘಟಕಗಳು, ಸಾಗಾಣಿಕೆ, ಸಂಗ್ರಹಣೆಯನ್ನು ಮತ್ತು ಮದ್ಯ ಸಾಗಾಟವನ್ನು ನಿಷೇಧಿಸಿ ಆದೇಶಿಸಿದ್ದಾರೆ.

ಈ ಆದೇಶವನ್ನು ಉಲ್ಲಂಘಿಸಿದಲ್ಲಿ ಪ್ರಜಾ ಪ್ರತಿನಿಧಿ ಕಾಯ್ದೆ 1951ರ ಕಲಂ 135ಸಿ (2) ಮತ್ತು (3) ರನ್ವಯ ಶಿಕ್ಷೆಗೆ ಒಳಪಡಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯೂ ಆದ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶದಲ್ಲಿ ತಿಳಿಸಿದ್ದಾರೆ.

# ಮೌನಾನುಷ್ಠಾನದ ಶಕ್ತಿ ವಿಜ್ಞಾನದ ಶಕ್ತಿಗೂ ಮಿಗಿಲು

### ಗರಗ ನಾಗಲಾಪುರ ಶ್ರೀ ನಿರಂಜನಪ್ರಭು ಮಹಾಸ್ವಾಮಿಗಳ ಹೇಳಿಕೆ । ಮೌನಾನುಷ್ಠಾನ ಮಂಗಲೋತ್ಸವ

■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ವಿಜ್ಞಾನಕ್ಕೂ ಮೀರಿದ ಶಕ್ತಿ ಆಧ್ಯಾತ್ಮಿಕ ಮೌನಾನುಷ್ಠಾನಕ್ಕಿದೆ ಎನ್ನುವುದನ್ನು ಅನೇಕ ಸ್ವಾಮೀಜಿಗಳು ತೋರಿಸಿಕೊಟ್ಟಿದ್ದಾರೆ. ಹಿಂದಿನ ಸ್ವಾಮಿಗಳ ಹಿರಿದಾಸೆಯಂತೆ ತಪಸ್ಸಿನ ಶಕ್ತಿಯನ್ನು ಬೆಳಸಿಕೊಳ್ಳಲು ಮತ್ತು ಲೋಕಕಲ್ಯಾಣಕ್ಕಾಗಿ 48 ದಿನಗಳ ಮೌನಾನುಷ್ಠಾನ ವ್ರಚಾಚರಣೆ ನಡೆಸಲಾಗಿದೆ ಎಂದು ಗರಗ ನಾಗಲಾಪುರ ಶ್ರೀಗುರು ಒಪ್ಪತ್ತೇಶ್ವರ ಸ್ವಾಮಿ ವಿರಕ್ತಮ್ಮಠದ ಶ್ರೀ ನಿರಂಜನಪ್ರಭು ಮಹಾಸ್ವಾಮಿಗಳು ಹೇಳಿದರು.

ಗರಗ ನಾಗಲಾಪುರ ಗ್ರಾಮದ ಶ್ರೀಗುರು ಒಪ್ಪತ್ತೇಶ್ವರ ಮಠದ ಸಭಾಮಂಟಪದಲ್ಲಿ ಸೋಮವಾರ ನಡೆದ ಶ್ರೀಮಠದ ಸ್ವಾಮಿಗಳಾದ ನಿರಂಜನಪ್ರಭು ಮಹಾಸ್ವಾಮಿಗಳು 48 ದಿನಗಳ ಮೌನಾನುಷ್ಠಾನ ಮಂಗಲಮಹೋತ್ಸವದಲ್ಲಿ ಸಮಾರಂಭದಲ್ಲಿ ಅವರು ಮಾತನಾಡಿದರು. ಈ ವರ್ಷ ಗುರು ಒಪ್ಪತ್ತೇಶ್ವರಸ್ವಾಮಿ ಮಳೆ ಬೆಳೆ ಚನ್ನಾಗಿ ಆಗಲಿ. ದೇಶದಲ್ಲಿ ಉತ್ತಮ ಮಳೆಯಾಗಿ ರೈತರಿಗೆ ಉತ್ತಮ ಬೆಳೆ ಬಂದು ಬೆಳದ ಬೆಳೆಗೆ ಉತ್ತಮ ಬೆಲೆ ಸಿಕ್ಕು ಸಮೃದ್ದಿಯಾಗಿ ಜನತೆ ಸುಖ ಸಂತೋಷ, ನೆಮ್ಮದಿ ದೊರೆಯಲಿ. ನಾಡಿಗೆ ಒಳ್ಳೆಯದಾಗಲಿ ಎಂದು ಬೇಡಿಕೊಂಡು ಶ್ರದ್ಧಾಭಕ್ತಿಯಿಂದ ಮಾನಾನುಷ್ಠಾನ ಮಾಡಿದ್ದೇನೆ. ಭಕ್ತರ ಕಲ್ಯಾಣಕ್ಕಾಗಿ ಅನುಷ್ಠಾನ ಶಕ್ತಿ ಪಡೆದು ಜನ ಕಲ್ಯಾಣಕ್ಕಾಗಿ, ಸಮಾಜದ ಉನ್ನತಿಗಾಗಿ ಮುಂದಾಗಬೇಕು ಎನ್ನುವ ಆಲೋಚನೆಯಿಂದ ಈ ಕಾರ್ಯ ಮಾಡಲಾಗಿದೆ ಎಂದರು.



ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಮಾತನಾಡಿ, ಜಪ, ತಪಗಳಿಂದ ಮನಸ್ಸು ಶಾಂತವಾಗಿರುತ್ತದೆ. ಮೌನ ಅನುಷ್ಠಾನದ ಬಲದಿಂದ ಗಳಿಸಿದ ಶಕ್ತಿಯನ್ನು ಭಕ್ತರ ಉದ್ಧಾರಕ್ಕಾಗಿ ಬಳಸಿ, ಸಮಾಜ ಸುಧಾರಣೆಗಾಗಿ ಬಳಸಬೇಕು ಎನ್ನುವುದು ಗರಗ ನಾಗಲಾಪುರದ ಒಪ್ಪತ್ತೇಶ್ವಸ್ವಾಮಿ ಮಠದ ನಿರಂಜನಪ್ರಭು ಸ್ವಾಮೀಜಿಗಳ ಜೀವನದ ಪರಮ ಗುರಿಯಾಗಿದೆ ಎಂದು ಹೇಳಿದರು.

ಸರ್ವೇಜನ ಸುಖೀನೋ ಭವಂತಿ ಎಂಬಂತೆ ನಿರಂಜನಪ್ರಭು ಸ್ವಾಮೀಜಿಗಳು ಜಾತಿ ಭೇಧವಿಲ್ಲದೇ ಎಲ್ಲರಲ್ಲೊಂದಾಗಿ ಅಪಾರ ಭಕ್ತ ಸಮೂಹ ರೂಪಿಸಿಕೊಂಡು ಸಮಾಜದ ಒಳತಿಗಾಗಿ ಶ್ರಮಿಸುತ್ತಿದ್ದಾರೆ. ಭಕ್ತರ ಕಲ್ಯಾಣಕ್ಕಾಗಿ ಮೌನಾನುಷ್ಠಾನ ವ್ರತ ಆಚರಣೆ ನಡೆಸಿ ಭಕ್ತರಿಗೆ ಶಕ್ತಿ, ಭಕ್ತಿ ಕುರಣಿಸಲು ಮುಂದಾಗಿದ್ದು ಶ್ಲಾಘನೀಯ ಎಂದರು. ಮನುಷ್ಯನ ಮನಸ್ಸು ಒಂದಲ್ಲಾ ಒಂದು ಆಲೋಚನೆಗಳಿಂದ ತುಂಬಿರುತ್ತದೆ. ಅದನ್ನು ಅನುಷ್ಠಾನಗೊಳಿಸಲು ಶಕ್ತಿ ಬೇಕು. ಮನಸ್ಸಿಗೆ ಉತ್ತಮ ಸಂಸ್ಕಾರ ನೀಡಬೇಕು. ಮನಸ್ಸಿಗೆ ಒಳ್ಳೆಯತನವನ್ನೇ ನೀಡಬೇಕು. ನಮ್ಮ ನಡುವಳಿಕೆಗಳು ಉತ್ತಮವಾಗಿರಬೇಕು. ಆಗ ಮಾತ್ರ ನಾವು ಉತ್ತಮ ವ್ಯಕ್ತಿಗಳಾಗಲು ಸಾಧ್ಯ ಎಂದರು.

ಗರಗ ನಾಗಲಾಪುರ ಗ್ರಾಮದಲ್ಲಿ ಮಧ್ಯ ಮಾರಾಟವನ್ನು ಬಂದ್ ಮಾಡಬೇಕು. ಈ ಹಿನ್ನಲೆಯಲ್ಲಿ ಎಲ್ಲಾ ಮಹಿಳೆಯರು ಗ್ರಾಮದಲ್ಲಿ ಮಧ್ಯ ಮಾರಾಟ ಮಾಡಬಾರದು ಎನ್ನುವ ನಿರ್ಧಾರಕ್ಕೆ ಬರಬೇಕು. ಈಗ ಗರಗ ನಾಗಲಾಪುರ ಗ್ರಾಮದಲ್ಲಿ ಮೊದಲು ಮಧ್ಯ ಮಾರಾಟ ಬಂದ್ ಆದರೆ ನಂತರ ಉಳಿದ ಅಕ್ಕಪಕ್ಕದ ಗ್ರಾಮಗಳಲ್ಲಿ ಬಂದ್ ಮಾಡಲು ಅಲ್ಲಿನ ಜನರು ಮುಂದಾಗುತ್ತಾರೆ. ಮಧ್ಯಪಾನ ಸೇರಿದಂತೆ ಇತರೆ ಕೆಟ್ಟ ಹವ್ಯಾಸಗಳಿಂದ ದೂರವಿದ್ದು, ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳುವಂತೆ ಸ್ವಾಮೀಜಿಗಳು ಹೇಳಿದರು.

ಮರಿಯಮ್ಮನಹಳ್ಳಿಯ ಗುರುಪಾದ ದೇವರ ಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿಗಳು ಸಭೆಯಲ್ಲಿ ಮಾತನಾಡಿದರು.

ನಿರಂಜನಪ್ರಭು ಮಹಾಸ್ವಾಮೀಜಿಗಳನ್ನು ಭಕ್ತರು ಸನ್ಮಾನಿ ಗೌರವಿಸಿದರು. ಸಂಗೀತ ಶಿಕ್ಷಕರಾದ ವಿಜಯಕುಮಾರ್ ಬಡಿಗೇರ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಮಲ್ಲಿಕಾರ್ಜುನ ಬಡಿಗೇರ್, ಪ್ರಕಾಶ್ ಬಡಿಗೇರ್ ತಬಲವಾದನ ನುಡಿಸಿದರು. ಕಲಾವಿದ ವಿರೂಪಾಕ್ಷಯ್ಯಸ್ವಾಮಿ ನಿರೂಪಿಸಿದರು. ಕಾರ್ಯಕ್ರಮದ ನಂತರ ಭಕ್ತರಿಗೆ ಪ್ರಸಾದ ವಿತರಣೆ ನಡೆಯಿತು.









Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA